
ಕಲ್ಯಾಣ ಕಿರಣ

ಬೆಲೆ : 3 ರೂ.

ಜುಲೈ, 1994



ಕಲ್ಯಾಣ ಕಿರಣ

ಮಾಸ ಪತ್ರಿಕೆ, ಜುಲೈ-1994, ಬಿಡಿ ಸಂಚಿಕೆ 3-00 ರೂ.

ಸಂಪುಟ : 24 ಸಂಚಿಕೆ : 2 ಬಸವ ಶಕೆ : 889,
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಮುಖಪುಟ : ವಿಶ್ವಗುರು ಬಸವಣ್ಣನವರು.

ಹೊದ್ದಿಕೆಯ 4 ನೇ ಪುಟ : ನೀಲಾಂಬಿಕಾ ತಾಯಿಯವರು.

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035,
2ನೇ ಬ್ಲಾಕ್, 20ನೇ ಮುಖ್ಯರಸ್ತೆ, ರಾಜಾಜಿನಗರ,
ಬೆಂಗಳೂರು-10. ದೂರವಾಣಿ : 3325335

KALYANA KIRANA - monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560074.
Phone : 8437234

ಧರ್ಮಕರ್ತ ಬಸವಣ್ಣ ಕಟ್ಟಿದ ಮಹಾಮನೆ–ಮಹಾಮಠ

ಅಯ್ಯಾ, ನಿಮ್ಮ ಶರಣರಲ್ಲದವರ ಮನೆ, ಕೆಮ್ಮನೆ ಕಂಡಯ್ಯಾ !
ನಿಮ್ಮ ಶರಣರ ಮನೆಯೆ ನೆಲೆವನೆ ನೋಡಾ ಎನಗೆ !
ಸಿರಿಯಾಳ ಮನೆ ಕಟ್ಟಿ ಬೇರೂರಿಗೆ ಒಕ್ಕಲು ಹೋದ
ದಾಸಿಮಯ್ಯ ಮನೆ ಕಟ್ಟಿ, ವ್ಯವಹಾರವ ಮಾಡಿ ಹೋದ
ಸಿಂಧುಬಲ್ಲಾಳ ಮನೆ ಕಟ್ಟಿ ಕೈ ಕೂಲಿಕಾರನಾಗಿ ಹೋದ
ಗಂಗೆವಾಳುಕರು ಮನೆ ಕಟ್ಟಿ, ಲಿಂಗದ ಹೊಲಬನರಿಯದೆ ಹೋದರು
ಇವರೆಲ್ಲರು ಮನೆಯ ಮಾಡಿ, ಮಹವನರಿಯದೆ
ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಪದವಿಗೊಳಗಾದರು
ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ
ಮಹಾಮನೆಯಂ ಕಟ್ಟಿದಡೆ, ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು
ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ ನಿಜಲಿಂಗಪದವಂ ಪಡೆದರು
ಆ ಗೃಹವ ನೋಡಬೇಕೆಂದು ನಾನು ಹಲಕಾಲ ತಪಿಸಿದ್ದೆನು.
ಕಪಿಲ ಸಿದ್ಧ ಮಲ್ಲಿನಾಥಾ, ನಿಮ್ಮ ಶರಣ
ಸಂಗನ ಬಸವಣ್ಣನ **ಮಹಾಮನೆಗೆ** ನಮೋ ನಮೋ ಎಂದು ಬದುಕಿದೆನು.

—ಶಿವಯೋಗಿ ಸಿದ್ಧರಾಮೇಶ್ವರ ೮೬೬

ಶರಣರಲ್ಲದವರ ಮನೆಯಲ್ಲಿ ಯಾವ ತತ್ತ್ವ–ಆದರ್ಶಗಳು ಇರುವುದಿಲ್ಲವಾದ್ದ–ರಿಂದ ಅದು ಬರಿದಾದ ಮನೆ; ಶರಣರ ಮನೆಯೆ ನನ್ನ ನಿಜನಿವಾಸ–ಸ್ವಂತ ಮನೆಯಂತೆ.

ಧರ್ಮಪಿತ ಬಸವಣ್ಣನವರಿಗೂ ಮೊದಲು ಕೆಲವು ಭಕ್ತರು ಆಗಿ ಹೋಗಿರಬಹುದು. ಸಿರಿಯಾಳ ಮಗನನ್ನೇ ಕಡಿದಿಟ್ಟು, ಅವಾಸ್ತವಿಕ ಆದರ್ಶ ಪ್ರಕಟಪಡಿ–ಸಿದ. ಆದರೇನು ಕಡೆಗೆ ಕೈಲಾಸದ ವರ ಪಡೆದುಕೊಂಡು ತನ್ನ ಭಕ್ತಿಯನ್ನು ವ್ಯವಹಾರವನ್ನಾಗಿ ಮಾಡಿದ. ಆ ಸಿರಿಯಾಳನಂತೆ ಮತ್ತೆ ಇನ್ನಾರಾದರೂ ಮಗನನ್ನು ಕಡಿದಿಟ್ಟು, ಶಿವನನ್ನು ಒಲಿಸಿಕೊಳ್ಳಲು ಸಾಧ್ಯವಾಯಿತೆ ? ಅವನ ಆದರ್ಶ ಅವನಿಗೇ

ಸೀಮಿತವಾಯಿತು.

ದಾಸಿಮಯ್ಯ ಬೆಲೆ ಬಾಳುವ ದೇವಾಂಗವನ್ನು ದಾನ ಮಾಡಿದ. ಪ್ರತಿಫಲವಾಗಿ ಅಪಾರ ಸಂಪತ್ತು ಪಡೆದ. ಕೊಟ್ಟುದಕ್ಕೆ ಪ್ರತಿಫಲ ಪಡೆದರೆ ಅದು ವ್ಯಾಪಾರವೇ ಸರಿ. ಸಿಂಧು ಬಲ್ಲಾಳ ತನ್ನಲ್ಲಿ ಬಂದ ಓರ್ವ ಜೋಗಿಯು ಹೆಂಡತಿಯನ್ನು ಕೇಳಲು ತನ್ನ ವಧುವನ್ನೇ ಕೊಟ್ಟ. ಶಿವನು ಇವರಿಬ್ಬರನ್ನೂ ಕೈಲಾಸಕ್ಕೆ ಒಯ್ದನು. ಗಂಗೆ–ವಾಳಂಕರು ಅಷ್ಟೇ ಭಕ್ತಿಯ ಮಾಡಿ ಕಡೆಯಲ್ಲಿ ಕೈಲಾಸವ ಬೇಡಿದರು. ಇವರು ಯಾರೂ ಪರಮಾತ್ಮನ ಅರಿವು ಪಡೆಯಲಾಗಲೀ, ಕೃಪೆ, ಸಾಕ್ಷಾತ್ಕಾರ ಪಡೆಯಲು ಆಗಲಿ ಪ್ರಯತ್ನಿಸದೆ ವ್ಯರ್ಥವಾದರು. ಇವರೆಲ್ಲರ ಗುರಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬ ಪದವಿಗಳು.

ಆದರೆ ದೇವರ ಪ್ರೀತಿಯ ಮಗನಾದ ಬಸವಣ್ಣ ಹಾಗಲ್ಲ ; ಆತ ತಾನಷ್ಟೇ ಭಕ್ತಿ ಮಾಡಿ, ಸರ್ರನೆ ಕೈಲಾಸಕ್ಕೆ ಹೋಗಬೇಕೆಂದು ಬಯಸಲಿಲ್ಲ. ಆತ ಕಟ್ಟಿದ ಮನೆ ಅಂದರೆ ಧರ್ಮದಿಂದ ಮರ್ತ್ಯಲೋಕವೆಲ್ಲವೂ ಭಕ್ತಿಯ ಸಾಮ್ರಾಜ್ಯವಾಯಿತು. ಈ ಧರ್ಮ ಮಂದಿರ ಪ್ರವೇಶಿಸಿದವರೆಲ್ಲರೂ ಪರಮಾತ್ಮನ ಜ್ಞಾನ–ಕೃಪೆ–ಸಾಕ್ಷಾತ್ಕಾರ ಪಡೆದರು. ಇಂಥ ಮಹಾಮನೆಯನ್ನು ನೋಡಬೇಕೆಂಬ ಹಂಬಲ ಉತ್ಕಟವಾಗಿತ್ತು. ಸೂಕ್ತ ಅವಕಾಶಕ್ಕಾಗಿ ಕಾಯುತ್ತಿದ್ದೆ. ಸೃಷ್ಟಿಕರ್ತನಾದ ಪರಮಾತ್ಮನೇ, ನಿಮ್ಮ ಸಂಗನ ಬಸವಣ್ಣನ ಮಹಾಮನೆಗೆ ನಮೋ ನಮೋ ಎನ್ನುತ್ತಿರುವೆ.

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ಹೇಳುವರು :

ಜಡರುಗಳ ಮನದ ಕತ್ತಲೆಯ ಕಳೆಯಲೆಂದು
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು.

ಹೀಗೆ ಧರ್ಮಕರ್ತ ಬಸವಣ್ಣನವರು ಕಟ್ಟಿದ ಮನೆ ಮಹಾಮನೆ ; ಮಠವು ; ಮಹಾಮಠ. ಜಾತಿ ಮತ ಪಂಥ ವರ್ಣವರ್ಗಗಳ ಭೇದವಿಲ್ಲದೆ ಎಲ್ಲರನ್ನೂ ಸ್ವಾಗತಿಸುವ, ಬರಮಾಡಿಕೊಳ್ಳುವ, ಬಂದವರನ್ನು ಇಂಬಿಟ್ಟುಕೊಂಡು ಆದರಿಸುವ ಮಹಾಮನೆ. ಸುಜ್ಞಾನ–ಸ್ವಾನುಭಾವ–ವಿರಕ್ತಿಗಳ ನೆಲೆಯಾದ ಮಹಾಮಠ. ಹೀಗಾಗಿ ಬಸವಣ್ಣ ಕಟ್ಟಿದ ಮಹಾಮನೆ ಆದರ್ಶ ಗೃಹಸ್ಥರಿಗೆ, ಮಹಾಮಠ ಆದರ್ಶ ವಿರಕ್ತರಿಗೆ ಉಭಯತರಿಗೂ ನೆಲೆಮನೆಯಾಯಿತು.

—ಮಾತಾಜಿ

ಅಂಗಕ್ಕೆ ಆಚಾರವೆ ಚಲುವು, ಮನಕ್ಕೆ ಮಹಾನುಭಾವವೇ ಚಲುವು
ಆತ್ಮಂಗೆ ಅರುಹೆ ಚಲುವು, ಅಖಂಡೇಶ್ವರನೆಂಬ
ನಿಜವಿಂಬುಗೊಂಡವಂಗೆ ಶರಣರ ಸಂಗವೆ ಚೆಲುವು !

ಶ್ರೀ ಮೂಜಗಂ ಅವರ ಸಂಕುಚಿತ ವಿಚಾರ

ಲೇಖನ–2

(ಜೂನ್ ಸಂಚಿಕೆಯಲ್ಲಿ 1ನೆಯ ಲೇಖನವಿದೆ)

—ಮಾತಾಜಿ

ದಾವಣಗೆರೆಯಿಂದ ಹೊರಡುವ ಜನತಾವಾಣಿ ಪತ್ರಿಕೆಯ ದಿ. 30–5–94 ರ ಸಂಚಿಕೆಯಲ್ಲಿ ಪ್ರಕಟವಾದ, "ಮೂಜಗಂ ಅವರ ನಿಲುವನ್ನು ಅರಿತುಕೊಳ್ಳಿರಿ, ಕಾಡುವುದ ಬಿಟ್ಟು ಕೂಡಿ ಹೋಗಿರಿ." ಎಂಬ ಮೂಜಗಂ ಪರ ಲೇಖನದ ಜೆರಾಕ್ಸ್ ಪ್ರತಿಯನ್ನು ಯಾರೋ ಅಂಚೆಯಲ್ಲಿ ಕಳಿಸಿಕೊಟ್ಟಿದ್ದಾರೆ. ಈ ಲೇಖನ ದಲಿತ ಧುರೀಣ ದುರುಗಪ್ಪ ಸೇರಿ 29 ಜನರ ಸಹಿ ಇದೆ ಎಂದು ಪ್ರಕಟಿಸಲಾಗಿದೆ. ಬರಹದ ಉದ್ದಕ್ಕೂ ಮೂಜಗಂ ಅವರು ತೋರಿಬರುತ್ತಾರೆ ಅರ್ಥಾತ್ ಅವರ ದೃಷ್ಟಿಕೋನ ಸ್ಪಷ್ಟವಾಗುತ್ತ ಹೋಗುತ್ತದೆ.

ಇಳಕಲ್ ಭಕ್ತರ ಕರೆಯ ಮೇಲೆ ಮೂಜಗಂ ಅವರು ಇಳಕಲ್‌ಗೆ ಹೋದುದಾಗಿಯೂ, ಆಗ ಇಳಕಲ್ ಸ್ವಾಮಿಗಳು ಮತ್ತು ಅವರ ಭಕ್ತರೇ ಇವರಿಗೆ ಅವಮಾನ ಮಾಡಿದುದಾಗಿಯೂ, ಇದನ್ನು ಇಳಕಲ್ ಭಕ್ತರನ್ನು ಕೇಳಿ ತಿಳಿಯಬಹುದೆಂದು ಪದೆ ಪದೇ ಬರೆದಿದ್ದಾರೆ. ಇಷ್ಟು ಪುನರಾವರ್ತನೆ ಮಾಡಿಮಾಡಿ ಹೇಳುವ ಬದಲು ಅಂದು ಏನು ನಡೆಯಿತು ಎಂಬುದನ್ನು ಯಾರಾದರೊಬ್ಬರು ಲೇಖನ ರೂಪದಲ್ಲಿ ಬರೆದು ಬಿಟ್ಟಿದ್ದರೆ ಸತ್ಯ ಸಂಗತಿ ವಿದಿತವಾಗುತ್ತಿತ್ತು. ಯಾರು ಸರಿ, ಯಾರು ತಪ್ಪು ಎಂದು ಮೂರನೆಯವರಾದ ವಾಚಕರು, ಸತ್ಯಾನ್ವೇಷಕರು ನಿರ್ಧರಿಸಲು ಬರುತ್ತಿತ್ತು.

1. "ಮಠಕ್ಕೆ ದಲಿತ ವ್ಯಕ್ತಿಯನ್ನು ಉತ್ತರಾಧಿಕಾರಿಯನ್ನಾಗಿ ಮಾಡುವ ಘೋಷಣೆ ಎಲ್ಲ ಭಕ್ತರನ್ನು ಕೇಳಿ ಮಾಡಬೇಕಿತ್ತು. ನಿಮಗೆ ತಿಳಿದಂತೆ ಮಾಡುವುದು ಯೋಗ್ಯವಲ್ಲ." ಎಂದು ಮೂಜಗಂ ಪ್ರತಿಪಾದಿಸಿದರು.

ಉ : ಮಾಡುವ ಕಾಲಕ್ಕೆ ಇಳಕಲ್ ಸ್ವಾಮೀಜಿಯವರು ಕೇಳದೆ ಇರುತ್ತಿದ್ದರೆ ? ಈಗ ಅವರು ಸಮಯ ಸ್ಫೂರ್ತಿಯಿಂದ ಕೇವಲ ಹೇಳಿಕೆ ನೀಡಿದ್ದಾರೆ ಅಷ್ಟೆ. ಅದು ಅವರ ದೃಷ್ಟಿಕೋನವನ್ನು ಬಿಂಬಿಸುವುದೇ ವಿನಾ ಅದಕ್ಕಿಂತ ಹೆಚ್ಚೇನನ್ನು ಮಾಡದು. ಇದಕ್ಕೆ ಮೂಜಗಂ ಅವರು ಅಷ್ಟು ಮಹತ್ವಕೊಟ್ಟು ಕಡ್ಡಿಯನ್ನು ಗುಡ್ಡ ಮಾಡಿದ್ದಾರೆ : ಅನವಶ್ಯಕ ಚರ್ಚೆಗಳಿಗೆ ಕಾರಣರಾಗಿದ್ದಾರೆ.

2. ಇಳಕಲ್ ಸ್ವಾಮಿಗಳ ಮಾತಿನಲ್ಲಿ ಖಚಿತವಾಗಿ ಏನು ಹೊರಬಂತು ಎಂಬುದರ ಸರಿಯಾದ ಮಾಹಿತಿ ಇಲ್ಲ. ಹೇಳುವಾಗ ಸ್ಪಷ್ಟತೆ ಇಲ್ಲದಿದ್ದರೆ ಮತ್ತು ವರದಿ

ಮಾಡುವವರು ಸರಿಯಾಗಿ ಮಾಡದೇ ಇದ್ದಾಗ ಹಲವಾರು ಪ್ರಮಾದಗಳು ಸಂಭವಿಸುತ್ತವೆ. ಗೊಂದಲ ಏಳುತ್ತವೆ. "ದಲಿತ ವ್ಯಕ್ತಿಯೇ ಉತ್ತರಾಧಿಕಾರಿ ; ಈ ನಿಲುವು ಅಚಲ" ಎಂದು ಒಮ್ಮೆ ಪ್ರಕಟವಾಯಿತು. ನಂತರ ಸುಧಾರಿಸಿದ ಆವೃತ್ತಿ (Revised edition) ಯನ್ನು ಅವರು ಹೊರತಂದರು. "ಸುಸಂಸ್ಕೃತ ಸಜ್ಜನ ದಲಿತ ವ್ಯಕ್ತಿ ಲಿಂಗಸಂಸ್ಕಾರಕ್ಕೊಳಪಟ್ಟು ಲಿಂಗವಂತನಾಗಿ ಬರುವುದಾದರೆ ಅಂಥ ಮಠವನ್ನು ಸ್ವೀಕರಿಸಲು ಸಿದ್ಧ...." ಎಂದು ನುಡಿದರೆಂದು ಅವರ ಅಭಿಮಾನಿಗಳು ವಿವರಣೆ ನೀಡಿದರು. ಒಂದೊಂದು ಮಾತಿನಲ್ಲಿಯೂ ತಾತ್ತ್ವಿಕ ವ್ಯತ್ಯಾಸಗಳು ಕಾಣಬರುತ್ತವೆ. ಇದೇ ಎಲ್ಲರಲ್ಲಿ ಗೊಂದಲಕ್ಕೆ ಕಾರಣವಾಯಿತೆಂದು ಮಾನ್ಯ ದುರುಗಪ್ಪ ಇವರ ಹೇಳಿಕೆ.

3. "ಮೊನ್ನೆ ಮೊನ್ನೆ ಬಿಜಾಪುರದಲ್ಲಿ ದಲಿತರು ಮೂರುಸಾವಿರ ಜನರು ಬೌದ್ಧ ಧರ್ಮ ಸ್ವೀಕಾರ ಮಾಡುವಾಗ ಮಹಾಂತ ಸ್ವಾಮಿಗಳು ಮತ್ತು ಬಸವ ತತ್ತ್ವದ ಅನುಯಾಯಿಗಳು ಮಲಗಿಕೊಂಡಿದ್ದರೆ ? ಅಲ್ಲಿಗೆ ಹೋಗಿ ಲಿಂಗವಂತರನ್ನಾಗಿ ಮಾಡಬಹುದಿತ್ತಲ್ಲ ?" ಎಂದು ದುರುಗಪ್ಪನವರು [ಮೂಜಗಂ ಪರವಾಗಿ] ಪ್ರಶ್ನಿಸಿದ್ದಾರೆ.

ಅ) ಈ ಸುದ್ದಿ ನಮಗೆ ತಿಳಿದುದು ತೀರಾ ತಡವಾಗಿ.

ಆ) ಇನ್ನೊಂದು ಪ್ರಶ್ನೆ ಇದೆ. ಒಂದು ದೊಡ್ಡ ಅಂಗಡಿ ಸಂಕೀರ್ಣ ಇದೆ. ಇಲ್ಲಿ ಬೇರೆ ಬೇರೆ ಅಂಗಡಿಗಳಿವೆ. ಯಾರೋ ಗಿರಾಕಿಗಳು ಖರೀದಿಗೆ ಬರುತ್ತಾರೆ. ಆಗ 'ನಮ್ಮ ಅಂಗಡಿಗೆ ಬನ್ನಿ, ಇಲ್ಲಿ ಸಾಮಾನು ತುಂಬಾ ಚೆನ್ನಾಗಿದೆ, ಯೋಗ್ಯ ದರವಿದೆ', ಎಂದು ಪ್ರಚಾರ ಮಾಡಬಹುದೇ ವಿನಾ ಆ ಅಂಗಡಿಗೆ ಹೋಗಬೇಡಿರಿ ಎಂದು ಹೇಳಲು ಈತನಿಗೆ ಹಕ್ಕಿಲ್ಲ. ಒಬ್ಬ ಹಸಿದು ಬರುತ್ತಾನೆ. ನಮ್ಮಲ್ಲಿ ಊಟಕ್ಕೆ ಬಾ ಎಂದು ಆಹ್ವಾನಿಸಲು ಅವಕಾಶವಿದೆ. ಆದರೆ ಆ ಮನೆಗೆ ಊಟಕ್ಕೆ ಹೋಗಬೇಡ ಎಂದು ಹೇಳಲು ಸಾಧ್ಯವೆ ? ಪ್ರಗತಿಪರ, ಸಂಧಾರಣಾತ್ಮಕ ಧರ್ಮವಾದ ಬೌದ್ಧ ಧರ್ಮಕ್ಕೆ ಹೋಗಬೇಡ ಎಂದು ನೇರವಾಗಿ ಹೇಳಿದರೆ ಆಗ ನಾವು ಕೊಡುವ ಹಿಂದು ವ್ಯಾಖ್ಯೆ (ಹಿಂದೂ ಒಂದು ಧರ್ಮವಲ್ಲ, ಹಲವು ಧರ್ಮಗಳ ಒಕ್ಕೂಟ, ಒಂದು ಪರಂಪರೆ) ಯನ್ನು ನಾವೇ ಒಪ್ಪಿಲ್ಲ ಎಂದು ಅರ್ಥವಾಗದೆ ?

ಅಭಾರತೀಯ, ಅಹಿಂದು ಧರ್ಮಗಳಾದ ಇಸ್ಲಾಂ, ಕ್ರೈಸ್ತ ಧರ್ಮಗಳಿಗೆ ಹೋಗಬೇಡಿ, ಇದರಿಂದ ದೇಶವು ಛಿದ್ರ ಛಿದ್ರವಾಗುತ್ತದೆ ಎಂದು ಬೇಕಾದರೆ ಹೇಳಬಹುದು. (ಇದನ್ನು ಹೇಳುವುದೂ ಬಹಳ ಕಷ್ಟ. ಒಬ್ಬ ಧಾರ್ಮಿಕ ಹಸಿವೆಯಿಂದ ಬಳಲುವಾಗ ಊಟಕ್ಕಿಕ್ಕದೆ ಎಲ್ಲವೂ ಬ್ರಹ್ಮ ಎಂದು ಬುರುಡೆ ಬಿಡುವ ಮಠಾಧೀಶರ

ತೋರಿಕೆಯ ದಲಿತಪ್ರೀತಿ ನೋಡಿದರೆ ; ಮತಾಂತರಗೊಳ್ಳಬೇಡಿ ಎಂದು ಧೈರ್ಯವಾಗಿ ದಲಿತರಿಗೆ ಹೇಳಲು ಮುಜುಗರವಾಗುತ್ತದೆ. ಆದರೂ ಧೈರ್ಯವಾಗಿ ಹೇಳುತ್ತೇವೆ-ಅಪ್ಪ ಬಸವಣ್ಣನ ಸಂವಿಧಾನ ಎಲ್ಲರಿಗೂ ಅಭಯ-ಆಶ್ರಯ ನೀಡುತ್ತಿರುವುದರಿಂದ.)

ಬುದ್ಧನು ತ್ಯಾಗಿಯೂ, ಯೋಗಿಯೂ, ಅಸಂಖ್ಯಾತರಿಗೆ ಸ್ಫೂರ್ತಿಚೇತನನು ಆಗಿರುವುದರಿಂದ ಚಿಂತನ ಶೀಲರು ಬುದ್ಧನನ್ನು ವಿರೋಧಿಸಲು ಅವರ ಅಂತರಾತ್ಮ ಒಪ್ಪದು. ಆದರೂ ನಾವು ದಲಿತರಿಗೆ ಹೀಗೆ ಹೇಳುತ್ತೇವೆ, "ನಿಮಗಾಗಿ ಯಾರು ತ್ಯಾಗ ಮಾಡಿದ್ದಾರೆ ? ಆಲೋಚಿಸಿರಿ, ಬಸವಣ್ಣನವರು ಪ್ರಧಾನ ಮಂತ್ರಿ ಪಟ್ಟ ಬಿಟ್ಟರು, ಗಡಿಪಾರು ಶಿಕ್ಷೆ ಹೊಂದಿದರು. ಹರಳಯ್ಯ-ಮಧುವರಸರು ಹುತಾತ್ಮರಾದರು ; ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಅಸಂಖ್ಯಾತ ಶರಣರ ವಧೆಯಾಯಿತು. ಇಷ್ಟೆಲ್ಲ ಆದುದು ನಿಮಗಾಗಿ ಅಲ್ಲವೆ ? ಬಸವಾದಿ ಪ್ರಮಥರ ತ್ಯಾಗವನ್ನು ನೀವು ಅರಿಯಿರಿ. ನೀವೆಲ್ಲ ಮೂಲತಃ ಶಿವಭಕ್ತರು, ಶರಣ ಸಂಸ್ಕೃತಿಯಲ್ಲಿ ಬೆಳೆದು ಬಂದವರು, ದಲಿತರ ಮನೆಗಳಲ್ಲಿ ಭಸ್ಮಧಾರಣೆಯುಂಟು ; ಲಿಂಗಾಯತರು ಬಸಪ್ಪ, ಬಸವರಾಜ, ನೀಲಮ್ಮ ಎನ್ನುವ ಹೆಸರಿಡಲು ಮರೆತರೂ ನೀವು ಮರೆತಿಲ್ಲ. ಆದ್ದರಿಂದ ಬಸವ ಧರ್ಮಾನುಯಾಯಿಗಳಾಗಿರಿ. ಮಡಿವಂತ ಲಿಂಗಾಯತರನ್ನು ಕಂಡು ಹಿಂಜರಿಯಬೇಡಿರಿ ಬಸವಣ್ಣನ ಮಾತೃಹೃದಯ ನೋಡಿರಿ...." ಎಂದು ಅವರಲ್ಲಿ ಬಿಂಬಿಸುತ್ತೇವೆ. ಹೀಗೆ ಅವರ ಮನಸ್ಸು ಒಲಿಸಬಹುದೇ ವಿನಾ ಒತ್ತಾಯ ಮಾಡಲು ಸಾಧ್ಯವಿಲ್ಲ.

ಇ) ಇಂದು ಬಹುಪಾಲು ಮತಾಂತರಗಳ ಹಿಂದೆ ರಾಜಕೀಯದ ವಾಸನೆ, ಗುಂಪುಗಾರಿಕೆ ಇತ್ಯಾದಿ ಇರುತ್ತದೆ. ಇದನ್ನು ಪ್ರೇರೇಪಿಸುವವರಿಗೆ ಆಧ್ಯಾತ್ಮಿಕ ಮೌಲ್ಯಗಳಾಗಲಿ, ತಾತ್ತ್ವಿಕ ಚಿಂತನೆಯಾಗಲೀ ಇರದು. ಮಲಗಿದವರನ್ನು ಎಬ್ಬಿಸಬಹುದು; ಮಲಗಿದ ಸೋಗು ಹಾಕಿದವರನ್ನು ಎಬ್ಬಿಸಲು ಬರುವುದೆ ?

ಡಾ॥ ಅಂಬೇಡ್ಕರರಿಗೆ ಕನ್ನಡ ಬರದಿದ್ದುದರಿಂದ ಬಸವಣ್ಣನವರ ತತ್ತ್ವಜ್ಞಾನ, ಕಳಕಳಿ ಅರ್ಥವಾಗಿರಲಿಲ್ಲ ಎನ್ನಬಹುದು. ಬಿಜಾಪುರದ ದಲಿತರಿಗೆ ಬಸವಣ್ಣನವರ ಬಗ್ಗೆ ತಿಳಿದಿರುವುದಿಲ್ಲವೆ ? ಅಂದಾಗ ಅದು ಉದ್ದೇಶ ಪೂರ್ವಕವಾಗಿ ಮಾಡುವ ಕ್ರಿಯೆ ಆಗಿರುವಾಗ ಯಾರು ತಾನೇ ಅವರನ್ನು ಮನ ಒಲಿಸಲು ಸಾಧ್ಯ ?

ಈ) ಯಾರನ್ನಾದರೂ ಮನವೊಲಿಸಿ ಮನೆಗೆ ಆಹ್ವಾನಿಸಿದಾಗ ಬಂದವರನ್ನು ಚೆನ್ನಾಗಿ ಸ್ವಾಗತಿಸಿ, ಆದರಿಸಿದರೆ, ಉಪಚರಿಸಿದರೆ ಅವರು ನಾಲ್ಕು ನಿಮಿಷ ಕುಳಿತಾರು. ಮನೆಯಲ್ಲಿರುವ ಹೆಂಡತಿಯಾಗಲೀ, ಅತ್ತೆಯಾಗಲಿ ಕಾವಲು ನಾಯಿಯಂತೆ ಬೊಗುಳಲಾರಂಭಿಸಿದರೆ ಆಗ ಕರೆದು ತಂದವರ ಮರ್ಯಾದೆ ಏನು ? ಬಂದವರ ಪರಿಸ್ಥಿತಿ ಏನು ? ಮೂಜಗಂ ಅಂಥವರ ದೃಷ್ಟಿಕೋನ ಹೊಂದಿದ ಮಠಾ-

ಧೀಶರು, ಇವರ ಗರಡಿಯಲ್ಲಿ ಪಳಗಿದ ಇದೇ ದೃಷ್ಟಿಕೋನದ ಭಕ್ತವೃಂದ ಅಸಹನೆಯಿಂದ ಕೂಗಾಡ ತೊಡಗಿದರೆ ಯಾರು ಬರಲು ಇಚ್ಛಿಸುವರು ? ನಾವು ಅದಕ್ಕಾಗಿಯೇ ದೀಕ್ಷಾ ಕಾರ್ಯಕ್ರಮಗಳ ಬಗ್ಗೆ ಭಯಂಕರ ಸುದ್ದಿ ಮಾಡದೆ ಆಸಕ್ತರಿಗೆ ಮೌನವಾಗಿ ಸಂಸ್ಕಾರ ಕೊಡುತ್ತೇವೆ. ಕೆಲವರು ಭಯಂಕರ ಪ್ರಚಾರ ಪ್ರಿಯರು. ಎಲ್ಲವನ್ನೂ ಸುದ್ದಿ ಮಾಡ ಹೋಗುತ್ತಾರೆ. ಮುಂದಿನ ಪರಿಣಾಮಗಳ ಬಗ್ಗೆ ಆಲೋಚಿಸುವುದಿಲ್ಲ. ನಮ್ಮಲ್ಲಿ, ನಮ್ಮ ಪ್ರವಚನಗಳು ನಡೆದಲ್ಲಿ ಅನೇಕ ಜನ ಲಿಂಗಾಯತೇತರರು, ದಲಿತರು ದೀಕ್ಷೆ ಪಡೆಯುತ್ತಲೇ ಇರುತ್ತಾರೆ. ನಾವು ಪ್ರಚಾರ ಪಡೆದು ಕೊಳ್ಳಲಿಕ್ಕಾಗಿ ಇದನ್ನು ಸುದ್ದಿ ಮಾಡಹೋಗುವುದಿಲ್ಲ. ಹಾಗೆ ಅನವಶ್ಯಕವಾಗಿ ಸುದ್ದಿ ಮಾಡುವುದರಿಂದ ದೀಕ್ಷೆ ಹೊಂದಿದವರಿಗೂ ಬಹಳ ತೊಂದರೆಯಾಗುತ್ತದೆ – ಮಡಿವಂತರಿಂದ. ನಮ್ಮಿಂದ ಬಸವ ತತ್ತ್ವದ ತರಬೇತಿ ಹೊಂದಿದವರಂತೂ ಸ್ವಯಂ ಇಚ್ಛೆಯಿಂದ ನವ ದೀಕ್ಷಿತರನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆ. ಅವರೊಡನೆ ವ್ಯವಹರಿಸುತ್ತಾರೆ.

ಇದೇ ಪ್ರಸಂಗ ತೆಗೆದುಕೊಳ್ಳಿರಿ. ಇಳಕಲ್ ಸ್ವಾಮಿಗಳು ಏನೋ ಒಂದು ಕ್ರಾಂತಿಕಾರಿ ಹೇಳಿಕೆ ಕೊಟ್ಟರು. ಮೂಜಗಂಗೆ ಇಷ್ಟವಿದ್ದರೆ ಸ್ವಾಗತಿಸಬೇಕಿತ್ತು, ಇಲ್ಲದಿದ್ದರೆ ಸುಮ್ಮನಿರಬೇಕಿತ್ತು. ಪ್ರಸಂಗವು ಸ್ವಲ್ಪದರಲ್ಲೇ ಮುಗಿಯುತ್ತಿತ್ತು. ಉದ್ವೇಗದ ಮತ್ತು ಪೆದ್ದುತನದ ಆತುರಾತುರ ಪ್ರತಿಕ್ರಿಯೆ ತೋರಿಸಿ **'ದಲಿತ ವಿರೋಧಿ ಸ್ವಾಮಿಗಳು'** ಎಂಬ ಬಿರುದು ಪಡೆದರು. ತಾವಷ್ಟೆ ಹೆಸರು ಕೆಡಿಸಿಕೊಂಡರೆ ? (ಅವರ ವಿಚಾರಧಾರೆಯ ಕೂಪಮಂಡೂಕ ಭಕ್ತವೃಂದದ ವರ್ತನೆಯಿಂದ) ಲಿಂಗಾಯತರೇ ದಲಿತವಿರೋಧಿಗಳು, ಪ್ರಗತಿ ವಿರೋಧಿಗಳು ಎಂಬ ಹೆಸರು ತಂದರು. ಶ್ರೀ ಪೇಜಾವರ ಸ್ವಾಮೀಜಿ ಎಷ್ಟು ಬುದ್ಧಿವಂತರು ! ಎಂದೂ ಯಾರಿಗೂ ದಲಿತರಿಗೆ ಬ್ರಾಹ್ಮಣ ದೀಕ್ಷೆ ಕೊಟ್ಟವರಲ್ಲ, ಕೊಡುವವರಲ್ಲ, ನೀವು ನಮ್ಮವರು ಎಂದು ಬಾಯಿ ತುಂಬ ಪ್ರೀತಿ, ತುಟಿಯ ಮರುಕ ತೋರಿ ಎಷ್ಟೊಂದು ಕೀರ್ತಿ ಹೊಂದುತ್ತಾರೆ ! (ಆದರಿಷ್ಟೆ ದಲಿತರು ಯಾಕೋ ಅವರನ್ನು ನಂಬುವುದಿಲ್ಲ !) ಆದಕ್ಕೇ ಹೇಳುವುದು, "ಇವರು ಉಳ್ಳಾಗಡ್ಡೆ ತಲೆ ಜನ, ಅವರು ತುಪ್ಪ ತಿನ್ನುವವರು ಎಂದು."

ಲಿಂಗಾಯತ ಸಮಾಜ, ಮಠಾಧಿಕಾರಿಗಳು ಎಲ್ಲರೂ ಸಂಕುಚಿತ ಬುದ್ಧಿಯವರೇನಲ್ಲ ; ಅವರು ಒಳ್ಳೆಯ ಪ್ರೀತಿ ಆದರಗಳಿಂದ ಶೂದ್ರ, ದಲಿತರು ಇನ್ನಿತರರನ್ನು ಕಾಣುತ್ತಲೇ ಬಂದಿದ್ದಾರೆ. ಸಾಕಷ್ಟು ಜನರು ಸದ್ದುಗದ್ದಲವಿಲ್ಲದೆ ದೀಕ್ಷೆ ಪಡೆದು ಅನ್ಯೋನ್ಯವಾಗಿ ನಡೆದುಕೊಳ್ಳುತ್ತಿದ್ದಾರೆ.

ಆದರೆ ದಲಿತರನ್ನು ಮಠಾಧಿಕಾರಿ ಮಾಡುತ್ತೇವೆ ಎಂಬ ಕೇವಲ ಪತ್ರಿಕಾ ಹೇಳಿಕೆ ಎಂಬ **'ಕಾಗದದ ಹುಲಿ'** ಕಂಡೇ ಮೂಜಗಂರವರು ಬೆದರಿಯೋ, ಕಸಿವಿಸಿಗೊಂಡೋ ಅನವಶ್ಯಕ ಹುಯಿಲು ಎಬ್ಬಿಸಿದ್ದು ಸರ್ವಥಾ ಸಮರ್ಥನೀಯವಲ್ಲ. ಇಂಥ ವರ್ತನೆಯಿಂದ, ಬಿಸಿ ಹಾಲಿಗೆ ಬಾಯಿಟ್ಟು ಸುಟ್ಟುಕೊಂಡ ತೆನಾಲಿ ರಾಮಕೃಷ್ಣನ ಬೆಕ್ಕಿನಂತೆ ಲಿಂಗವಂತ ಸಮಾಜ ಎಂದರೇ ದಲಿತರು ದೂರ ಹೋಗುವಂತಾದರೆ ಆಗ ನಾವು, ಬಸವ ತತ್ತ್ವದವರು ಮಾಡಬೇಕೇನು ? ಎಂದು ಮೂಜಗಂ ಅಭಿಮಾನಿ ದುರುಗಪ್ಪನವರನ್ನು ಕೇಳಬೇಕಾಗಿದೆ.

4. ಮೂಜಗಂ ಅವರು ಹರಿಜನರುದ್ಧಾರಕ್ಕಾಗಿ ಬಹಳ ಕೆಲಸ ಮಾಡಿದ್ದಾರೆ ಎಂದು ದುರುಗಪ್ಪನವರು ಶ್ರೀಗಳಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇದನ್ನರಿಯದ ಕೆಲವು ಮಠಾಧೀಶರು ಮೂಜಗಂ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ದುರ್ಗಪ್ಪನವರ ಆಪಾದನೆ. ದಲಿತರ ಉದ್ಧಾರ ಮಾಡುವುದಾದರೆ ಲಿಂಗಧರಿಸಿ, ಅನ್ನ-ವಸ್ತ್ರ-ನೌಕರಿ ನೀಡಿರಿ. ಸ್ವಾಮಿಗಳನ್ನು ಮಾಡುವುದಾದರೆ ಸಜ್ಜಲ ಗುಡ್ಡದ ಶರಣಮ್ಮನವರಂತೆ ಆಗಲಿ ಎಂದು (ಮೂಜಗಂ ಪರವಾಗಿ) ಸೂಚಿಸಿದ್ದಾರೆ.

ಅ. ಅನ್ನ-ವಸ್ತ್ರ-ನೌಕರಿ ಕೊಡುವುದು ಸರ್ಕಾರದ ಕೆಲಸ ಮತ್ತು ವಿದ್ಯಾ ಸಂಸ್ಥೆ ಹೊಂದಿರುವ ಮೂಜಗಂ ಅವರಂಥವರ ಕೆಲಸ. ಜಾಗೃತ ದಲಿತರು ಇಂದು ಕೇಳುವುದು ಇವನ್ನಲ್ಲ; ಅವರು ಸರ್ಕಾರದ ಚೊಚ್ಚಲು ಮಕ್ಕಳು; ಸರ್ಕಾರವೇ ಎಲ್ಲ ಕೊಡುತ್ತದೆ ಎಂಬುದನ್ನು ಪ್ರಾಜ್ಞರಾದ ಅವರು ತಿಳಿದಿದ್ದಾರೆ. ಅವರು ಕೇಳುತ್ತಿದ್ದರೆ, ಅದು ಸಂಸ್ಕಾರವನ್ನು; ಕೇವಲ ಸಂಸ್ಕಾರವೊಂದನ್ನೇ ಅಲ್ಲ. ಸಮಾನತೆಯನ್ನು, ಧಾರ್ಮಿಕ ಸಹೋದರತ್ವ (religious brotherhood) ವನ್ನು. [ಲಿಂಗವಂತ ಸಮಾಜದ ಭಕ್ತವರ್ಗಕ್ಕೆ ಕೊಡಲಾಗದ ಸಮಾನತೆಯನ್ನು, ಗುರು-ಜಂಗಮತ್ವದ ಹಕ್ಕನ್ನು ಮನ್ನಣೆಯನ್ನು ಮೂಜಗಂ ರಂಥವರು ದಲಿತರಿಗೆ, ಶೂದ್ರರಿಗೆ ಕೊಟ್ಟಾರೆಯೆ ?!]

ಆ. "ಸಜ್ಜಲ ಗುಡ್ಡದ ಶರಣಮ್ಮನವರಂತೆ ಆಗಿರಿ" ಎಂದು ಮೂಜಗಂ ಶ್ರೀಗಳು ಕ್ಷಮಿಸಿ, ದುರ್ಗಪ್ಪನವರು ಹಲವು ಬಾರಿ ಹೇಳುವುದರ ಮರ್ಮವೇನು?

ವೈದಿಕ ಧರ್ಮವು ಶೂದ್ರರು, ಅಂತ್ಯಜರು ಮತ್ತು ಮಹಿಳೆಯರಿಗೆ ಬೆಳೆಯುವ ಯಾವ ಅವಕಾಶವನ್ನೂ ಕೊಡಲಿಲ್ಲ. ಹಾಗೆಂದ ಮಾತ್ರಕ್ಕೆ ಅವರು ಯಾರೂ ಮೇಲೆ ಬರಲೇ ಇಲ್ಲವೆ? ಅದ್ಭುತವಾದ ಪ್ರತಿಭಾತ್ಮಕ ಚೇತನಗಳು ಯಾರು ಅವಕಾಶ ಕೊಡದಿದ್ದರೂ ಆತ್ಮಸಾಮರ್ಥ್ಯದಿಂದ ಚಿಮ್ಮಿ ಮೇಲಕ್ಕೇರುತ್ತಾರೆ. ಇದು ದೇವನ ಲೀಲೆ ; **ಸೃಷ್ಟಿಕರ್ತ ಸತ್ಯದ ಪರವಾಗಿ ಸಾಕ್ಷಿ ನುಡಿಯು–**

ವಂತೆ ಮಹಾಚೇತನಗಳ ಮೂಲಕ ತನ್ನ ಇಚ್ಛೆಯನ್ನು ಪ್ರಕಟಿಸುತ್ತಿರುತ್ತಾನೆ. ಅದಕ್ಕೇ ಬಸವಣ್ಣನವರು ಹೇಳುವುದು,

ವ್ಯಾಸ ಬೋಯಿತಿಯ ಮಗ–ಗಂಗಾಮತದವನು
ಮಾರ್ಕಂಡೇಯ ಮಾತಂಗಿಯ ಮಗ
ಅಗಸ್ತ್ಯ ಕುಂಭ ಸಂಭವ–ಕುಂಬಾರನು,
ಕಶ್ಯಪ ಕಮ್ಮಾರ

ಅಂಥ ವಾತಾವರಣದಲ್ಲೂ ಮೈತ್ರೇಯಿ-ಗಾರ್ಗೇಯಿ ಜ್ಞಾನಿಗಳಾದರು. ವಿಷಮ ಪರಿಸರವನ್ನು ಎದುರಿಸಿಯೂ ಪ್ರತಿಭಾವಂತರು ಮೇಲೆ ಬರುವರು. ಅವರನ್ನು ನಂತರ ವೈದಿಕರು ಒಪ್ಪಿಕೊಂಡರಲ್ಲದೆ, ಗೋತ್ರ ಪುರುಷರನ್ನಾಗಿಯೂ ಮಾಡಿಕೊಂಡದ್ದು ಈ ದೇಶದಲ್ಲಿ ಹಚ್ಚಹಸಿರಿನ ಕಥೆಯು. ಆದರೆ ಸಾಮಾಜಿಕ ಹಕ್ಕುಗಳು ಸಾರ್ವತ್ರಿಕವಾಗ ಬೇಕೆಂದು ಕೇಳಿದಾಗ ಸಂಪ್ರದಾಯವಾದಿಗಳ ಗಲಾಟೆ ಶುರುವಾಗುತ್ತದೆ ಎಂಬುದು ಗಮನಾರ್ಹ. ವಿಶ್ವಾಮಿತ್ರ ಕ್ಷತ್ರಿಯ ; ತನ್ನ ಪಾಡಿಗೆ ತಾನು ಇನ್ನೂ ಸಾವಿರವರ್ಷ ತಪಸ್ಸು ಮಾಡಿದರೂ ಯಾರೇನೂ ಬೇಡವೆನ್ನುತ್ತಿರಲಿಲ್ಲ. ಅವನಿಗೆ ರಾಜರ್ಷಿ ಪದವಿ ಸಿಕ್ಕಿತ್ತು, ಆದರೆ ಹುಟ್ಟು ಬ್ರಾಹ್ಮಣನಿಗೆ ಮೀಸಲಾಗಿದ್ದ ಬ್ರಹ್ಮರ್ಷಿ ಪದವಿಯನ್ನು ಕ್ಷತ್ರಿಯನಾದ ವಿಶ್ವಾಮಿತ್ರ ಕೇಳುವ ತಪ್ಪು ಮಾಡಬಹುದೆ ? ಅವನು ಕೇಳಿದ್ದೆ ಅಪರಾಧವಾಗಿ ಕಂಡಿತು.

ದಿ॥ ಚಿನ್ಮಯಾನಂದ ಸ್ವಾಮಿಗಳು ಪ್ರತಿಭಾವಂತರು, ತಮ್ಮ ವಾಗ್ಮಿತ್ವದಿಂದ ಅಪಾರ ಜನಸಮೂಹವನ್ನು ಆಕರ್ಷಿಸಿದರು. ಅವರು ಭಗವದ್ಗೀತೆ ಪ್ರವಚನ ಹೇಳಲು ಶುರು ಮಾಡಿದಾಗ ಸಂಪ್ರದಾಯಸ್ಥರಿಂದ ವಿಪರೀತ ಪ್ರತಿಭಟನೆ ಒದಗಿತಂತೆ, ಬಹಳ ಕಿರುಕುಳಗಳೂ ಕೊಡಲ್ಪಟ್ಟವಂತೆ. "ಹುಟ್ಟಿನಿಂದ ಶೂದ್ರರಾದ ಇವರಿಗೆ ಪವಿತ್ರ ಗ್ರಂಥ (?) ಭಗವದ್ಗೀತೆಯನ್ನು ಹೇಳುವ ಹಕ್ಕಿಲ್ಲದ"? ಎಂಬುದು ಅವರ ವಾದ. ಕಾಲಾನಂತರದಲ್ಲಿ ವಿದ್ಯಾವಂತ ಸಮೂಹ ಇವರನ್ನು ಬೆಂಬಲಿಸಿತು, ಮಡಿವಂತರು ತೆಪ್ಪಗಾದರು, [ಗದ್ದುಗೆ ಕಟ್ಟಿ ಆದಾಯ ಬರ ತೊಡಗಿದ ಮೇಲೆ ಪೂಜೆ ಮಾಡಲು ಮೊದಲು ಸಿದ್ಧರಾಗುವವರು ಇದೇ ಪುರೋಹಿತಶಾಹಿಯವರೇ ಎಂಬುದನ್ನೂ ತಾವು ತಿಳಿದಿರುವುದು ಒಳ್ಳೆಯದು.]

ಪೂಜ್ಯ ಸಜ್ಜಲಗುಡ್ಡದ ಶರಣಮ್ಮನವರಾಗಲೀ, ಸೊಲ್ಲಾಪುರದ ರುದ್ರಮ್ಮನವರಾಗಲೀ ತಮ್ಮ ಪಾಡಿಗೆ ತಾವು ಒಂದೆಡೆ ಕುಳಿತು ಪೂಜೆ–ತಪಸ್ಸು ಮಾಡುತ್ತಾ ಇದ್ದು ಹೋದರು. ಯಾವುದೇ ಸಾಮಾಜಿಕ–ಧಾರ್ಮಿಕ ಹಕ್ಕುಗಳನ್ನು–ಸಮಾನತೆಯನ್ನು ಕೇಳಹೋಗಲಿಲ್ಲ. ಅದಕ್ಕಾಗಿಯೇ ಮೂಜಗಂ ಅವರು ಅಷ್ಟು ಪ್ರಶಂಸಿಸುತ್ತಾರೆ. ಅವರು

[33 ನೇ ಪುಟಕ್ಕೆ ಮುಂದುವರಿದಿದೆ.]

ಕ್ರಿಸ್ತ ಧರ್ಮ - ಬಸವ ಧರ್ಮ

—ಮಾತಾಜಿ

ಲಿಂಗಾಯತ ಧರ್ಮ ಕ್ರೈಸ್ತ ಧರ್ಮಗಳೆರಡೂ ಕೆಲವು ಆಚಾರ–ವಿಚಾರಗಳಲ್ಲಿ ಅಭಿಪ್ರಾಯ ಭೇದವನ್ನು ಹೊಂದಿದ್ದರೂ ಎರಡೂ ಪ್ರವಾದಿ ಧರ್ಮಗಳು (prophetic religions) ಆದ ಕಾರಣ ಬಹಳಷ್ಟು ಹೋಲಿಕೆ ಹೊಂದಿವೆ. ಯಹೂದಿ ಧರ್ಮದ ಸಂಕುಚಿತ ವಿಚಾರ, ಶಾಸ್ತ್ರ ದಾಸ್ಯದ ವಿರುದ್ಧ ಏಸುವಿನ ಬೋಧನೆ ಸಾಗಿದರೆ ವೈದಿಕ ಧರ್ಮದ ಸಂಕುಚಿತ ವಿಚಾರ, ಶಾಸ್ತ್ರದಾಸ್ಯ, ಕರ್ಮಕಾಂಡದ ವಿರುದ್ಧ ಬಸವಣ್ಣನವರ ಹೋರಾಟ, ಜಾಗೃತಿ ಸಾಗಿತು, ಬೈಬಲ್–ವಚನ ಸಾಹಿತ್ಯದಲ್ಲಿ ನನ್ನ ಕಣ್ಣಿಗೆ ಬಿದ್ದ ಕೆಲವು ಹೋಲಿಕೆ, ವಿಚಾರಗಳನ್ನು ಆಗಾಗ ಬರೆಯುತ್ತೇನೆ.

ಏಸುವು ಶಿಲುಬೆಗೇರಿಸಲ್ಪಡುವ ಮೊದಲಿಗೆ, ಜೆರೂಸಲೇಮಿಗೆ ಬಂದಿರುತ್ತಾನೆ. ಮುಂದೆ ತನಗೆ ಯಹೂದಿ ಮತಾಂಧರಿಂದ ಒದಗಲಿರುವ ಶಿಕ್ಷೆಯ ಅರಿವು ಆಗುತ್ತದೆ. ಆಗ ಹೇಳುತ್ತಾನೆ :

"ನಾನು ಸ್ವರ್ಗದಲ್ಲಿರುವ ನನ್ನ ಮಹಿಮಾಪದವಿಗೆ ಹಿಂತಿರುಗುವ ಸಮಯವು ಸಮೀಪಿಸಿದೆ. ನಿಮಗೆ ಸತ್ಯವಾಗಿ ಹೇಳುತ್ತೇನೆ. ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಹೇಗೆ ಒಂಟಿಯಾಗಿ ಉಳಿಯುವುದೋ ಹಾಗೆಯೇ ನಾನೂ ಸಹ ಸಾಯದಿದ್ದರೆ ಒಂಟಿಯಾಗಿಯೇ ಉಳಿಯುವೆನು. ನಾನು ಸತ್ತರೆ ಸಮೃದ್ಧಿಯಾದ ಫಲವನ್ನು ಕೊಡುವೆನು." [25 : 12 ಯೋಹಾನ]

ಈ ಹೋಲಿಕೆಯನ್ನೊಳಗೊಂಡ ಮತ್ತು ಇದಕ್ಕೂ ವಿಸ್ತೃತವಾದ ವಿಚಾರ ಚನ್ನಬಸವಣ್ಣನವರ ವಚನದಲ್ಲಿ ಬಂದಿದೆ.

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ ;
ಮುಂದಣ ಫಲದೊಳಗರಸಿಕೊ !
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನ ಬೇಡ
ಮುಂದಣ ಬಣ್ಣದೊಳಗರಸಿಕೊ !
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ
ಮುಂದಣ ಅಗ್ನಿಯೊಳಗರಸಿಕೊ ।
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ,
ಇದು ಕಾರಣ, ಕೂಡಲ ಚನ್ನಸಂಗನ ಶರಣರ,

ಪ್ರಾಣ ಪ್ರತಿಬಿಂಬದೊಳಗರಸಿಕೊ, ಸಂಗನ ಬಸವಣ್ಣಾ ।

ಈ ವಚನದ ಸನ್ನಿವೇಶವನ್ನು ನಾನು ಹೀಗೆ ಊಹಿಸುತ್ತೇನೆ. ದ್ವಾದಶಿಯಂದು ಶ್ರೀ ಗುರು ಬಸವಣ್ಣನವರ ಗಡಿಪಾರು ಆಗಿದೆ. ಮರುದಿವಸವೇ ಶರಣರ ಬಂಧನವಾಗಿದೆ. ಗುಪ್ತ ವಿಚಾರಣೆಯೂ ಆಗಿ, ಫಾಲ್ಗುಣ ಮಾಸದ ಚತುರ್ದಶಿಯಂದು ವಧೆಯೂ ಆಗಿದೆ. ಎಲ್ಲ ಶರಣರನ್ನು ಈ ಪ್ರಸಂಗ ಬಹಳ ನೋಯಿಸಿದೆ. ಆದರೂ ಚನ್ನಬಸವಣ್ಣನವರು ಬಲಿದಾನ ಮಾಡಿದ ಶರಣರನ್ನು ಕೊಂಡಾಡುತ್ತ ಸಮಾಧಾನ ಮಾಡಿಕೊಂಡು, ಈ ವಾರ್ತೆಯನ್ನು ಬಸವಣ್ಣನವರಿಗೆ ಪ್ರಸ್ತುತ ವಚನದ ಮೂಲಕ ತಲುಪಿಸಲು ಯತ್ನಿಸಿದ್ದಾರೆ.

ಸಮಾನತೆಯ ಸ್ಥಾಪನೆಗಾಗಿ ವಧೆಯಾದ ಶರಣ ಚೇತನಗಳಾದ ಹರಳಯ್ಯ-ಮಧುವಯ್ಯ-ಶೀಲವಂತರು ಭೂಮಿಯಲ್ಲಿ ಬಿದ್ದ ಬೀಜಗಳಂತೆ, ಕಾಸಿ ಕರಗಿಸಿದ ಬಂಗಾರದಂತೆ,ಹೊತ್ತಿಸಿದ ದೀಪ್ತಿಯಂತೆ, ಅವರ ಪ್ರಾಣಗಳು ಲಿಂಗದೊಳಗೆ ಅಡಗಿವೆ. ಬಸವಣ್ಣನವರ ಪ್ರಾಣ ಲಿಂಗಯ್ಯನಲ್ಲಿ ತದ್ಗತವಾಗಿದೆ. ಆದ್ದರಿಂದ ಮರೆಯಾಗಿರುವ ಆ ಪವಿತ್ರಾತ್ಮರು ಸತ್ತಿಲ್ಲ, ಬಸವಣ್ಣನವರ ಪ್ರಾಣದಲ್ಲಿಯೇ ಅಡಗಿ ಅಮರಾತ್ಮರಾಗಿದ್ದಾರೆ. ಅಲ್ಲಿಯೇ ಹುಡುಕಬೇಕು.

ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳನ್ನು, ಮ್ಯಾಥ್ಯೂ, ಮಾರ್ಕ್, ಲೂಕ್, ಜಾನ್ ಇವರಿಂದ ಬರೆಯಲ್ಪಟ್ಟವು, ಓದಿದಾಗ ಕೆಲವೊಂದು ಅಭಿಪ್ರಾಯಗಳು ಮೂಡಿದವು.

ಏಸುವು ಅವಿದ್ಯಾವಂತ ; ವಿದ್ಯಾವಂತನಲ್ಲ ; [ಜಾನ್ 7:15] ಆದರೆ ಅವನು ಅನುಭವದ ವಾಣಿಯನ್ನು ಬೋಧಿಸಿದ ; ಹೆಚ್ಚಾಗಿ ಅದು ಅಂತರ್ವಾಣಿ. ದೇವನ ಆದೇಶದ ಪ್ರತಿಧ್ವನಿ. ಬಸವಣ್ಣನವರು ಅಪಾರ ವಿದ್ವಾಂಸರು, ಅವರದು ಸಮಗ್ರ ವ್ಯಕ್ತಿತ್ವ. ಹುಟ್ಟಿದ ಮನೆ ಪರಿಸರ ಅವರನ್ನು ವಿದ್ಯಾಕೋವಿದರನ್ನಾಗಿ ಮಾಡಿತು. ಲೌಕಿಕ ವಿದ್ಯೆಗಿಂತಲೂ ಅವರ ಅಂತರ್ವಾಣಿಯು ಅದ್ಭುತವಾಗಿ ಸತ್ಯವನ್ನು ಸಾರಿತು. ಏಸುವು ಹೆಚ್ಚಾಗಿ ಸಾಂಕೇತಿಕ ಭಾಷೆಯಲ್ಲಿ, ದೃಷ್ಟಾಂತಗಳ ರೂಪದಲ್ಲೇ ಬೋಧೆ ಮಾಡಿರುವುದು. ಅವು ಸುಂದರವೂ-ಅರ್ಥಗರ್ಭಿತವೂ ಆಗಿದ್ದರೂ ತಾತ್ತ್ವಿಕತೆ ಮತ್ತು ತಾರ್ಕಿಕತೆ (Logic) ಕಮ್ಮಿ. ಬಸವಣ್ಣನವರ ವಚನಗಳಲ್ಲಿ ಹೇಗೆ ದೃಷ್ಟಾಂತ, ದ್ರಾಷ್ಟಾಂತ ಪರಿಪೂರ್ಣ ಹೋಲಿಕೆ ಹೊಂದುವವೋ ಹಾಗೆ ಏಸುವಿನ ಬೋಧೆಯಲ್ಲಿ ಸ್ಪಷ್ಟತೆ, ನಿರ್ದಿಷ್ಟತೆ ಕಾಣಬರದು; ಹೋಲಿಕೆ ರಂಜನೀಯವೆನಿಸಿದರೂ ತತ್ತ್ವವು ಮಸುಕಾಗಿರುವುದು.

ಬಸವಣ್ಣನವರು, "ಮೃದು ವಚನವೇ ಸಕಲ ಜಪ, ಸಕಲ ತಪ, ಸದ್ವಿನಯವೇ ಸದಾಶಿವನ ಒಲುಮೆ" ಎಂದರು. ಅದರಂತೆಯೇ ನಡೆದರು. ವೈದಿಕರ ಕರ್ಮಕಾಂಡ, ಆಚಾರ-ವಿಚಾರಗಳನ್ನು ವಿಡಂಬಿಸಿ ಮಾತನಾಡಿದರೂ ಒರಟು ಭಾಷೆ ಬಳಸಲಿಲ್ಲ.

"ಏನಯ್ಯಾ ವಿಪ್ರರು ನುಡಿದಂತೆ ನಡೆಯರು.
ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ."
"ಹಾರುವನೇಸು ಕಾಲ ಭಕ್ತನಾದಡೆಯೂ ನೇಣಿನ ಹಂಗ ಬಿಡ"
"ಸತ್ತುದನೆಳೆವನು ಅದೆತ್ತಣ ಹೊಲೆಯ
ಹೊತ್ತು ತಂದು ನೀವು ಕೊಲುವಿರಿ."
"ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ."
"ಹೋಮದ ನೆವದಲ್ಲಿ ಹೋತನ ತಿಂಬ ಅನಾಮಿಕರು."

ಈ ರೀತಿ ಕಟುವಾಗಿ ನುಡಿಯುತ್ತಾರೆ.

ಆದರೆ ಏಸುವು ಪ್ರತಿಯೊಮ್ಮೆ ಯಹೂದಿಗಳನ್ನು ಮತ್ತು ಫರಿಸಾಯರನ್ನು ಕಂಡಾಗಲೆಲ್ಲ "ಸರ್ಪಜಾತಿಯವರೇ, ಕಪಟಿಗಳೇ, ವಂಚಕರೇ, ಡಾಂಭಿಕರೆ" ಎಂದೇ ಮಾತನಾಡಲು ಆರಂಭಿಸುವುದು. ಯಹೂದಿ ಮಂದಿರಗಳಿಗೇ ಹೋಗಿ ನೆರೆದ ಜನರೆದುರು ಈ ರೀತಿ ಹಳಿಯುತ್ತಿದ್ದುದರಿಂದಲೇ ಯಹೂದಿ ಪುರೋಹಿತರು ಅಷ್ಟು ಕ್ರೂರಿಗಳಾಗಿ ವರ್ತಿಸಿದರೇನೋ ಎನ್ನಿಸುವುದು.

ಬಸವಣ್ಣನವರು ತಪ್ಪು ಆಚರಣೆಗಳನ್ನು ವಿಡಂಬಿಸಿದರೂ, ಯಾರನ್ನೂ ಇದಿರಿಗೆ ಹಳಿಯುವಂತೆ ಕಾಣದು ಮತ್ತು ಅವರು ಯಾರ ದೇವಾಲಯಗಳ ಬಳಿಗೆ ಹೋಗಿಯೂ ಅವರನ್ನು ಟೀಕಿಸಲಿಲ್ಲ; ಅನುಭವ ಮಂಟಪ ಕಟ್ಟಿ ವಿಧಾಯಕವಾಗಿ ಜನರನ್ನು ತತ್ತ್ವ ಬೋಧೆ ಮಾಡಿ ಆಕರ್ಷಿಸಿದರು.

"ಏಸುವು ನಾನು ದೇವರ ಮಗ, ನನ್ನನ್ನು ನಂಬಿ. ದೇವರೇ ನನ್ನನ್ನು ಮನುಷ್ಯ ಕುಮಾರನನ್ನಾಗಿ ಕಳಿಸಿದ್ದಾನೆ...."ಎಂಬ ಮಾತು ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳ ತುಂಬ ಬರುತ್ತದೆ. "ನೀವು ನನ್ನನ್ನು ನಂಬುತ್ತಿಲ್ಲ ; ಆದ್ದರಿಂದ ದೇವರನ್ನು ನಂಬಿದಂತಾಗದು. ನನ್ನನ್ನು ನಂಬಿದರೆ ನನ್ನನ್ನು ಕಳಿಸಿದ ದೇವರನ್ನು ನಂಬಿದಂತೆ ಆಗುವುದು" ಎನ್ನುವನು. ಬಸವಣ್ಣನವರು ಈ ಶೈಲಿಯಲ್ಲಿ ಎಂದೂ ಜನರಿಗೆ ಬೋಧೆ ಮಾಡಲಿಲ್ಲ. "ನನ್ನನ್ನು ನಂಬಿ" ಎನ್ನಲಿಲ್ಲ. ಅವರು ನೇರವಾಗಿ ಜನರಿಗೆ ತತ್ತ್ವವನ್ನು ಬೋಧಿಸುತ್ತಾ ಹೋದರು. ನನ್ನನ್ನು ದೇವರ ಮಗನೆಂದು ನಂಬಿರಿ ಎಂದು ಅವರು ಹೇಳುವ ಅಗತ್ಯವೇ ಒದಗಿ ಬರಲಿಲ್ಲ, "**ಸಂಗನ ಬಸವಣ್ಣ** "ಎಂಬುದು ಸಹಜ

ವಾಗಿಯೇ ರೂಢಿಗೆ ಬಂದಿತು ಮತ್ತು ಅವರು ತಾವು ಕಿಂಕರರು, ಶಿವಭಕ್ತರಿಗಿಂತ ಕಿರಿಯರು ಎಂದು ಹೇಳಿದರೂ ಶರಣರು ಮನತುಂಬಿ ಹೊಗಳಿದರು, ಧರ್ಮಕರ್ತನೆಂದು.

೧. ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಬಸವಣ್ಣನ."–ಪ್ರಭುದೇವರು

೨. ಕಲಿದೇವರ ದೇವನು ಕಾಯಗೊಂಡಿಪ್ಪುದನು
ನಿನ್ನಿಂದ ಕಂಡೆನಯ್ಯಾ ಬಸವಣ್ಣ–ಮಾಚಿದೇವರು

೩. ಅಮರೇಶ್ವರ ಲಿಂಗದ ಅನುವಿನ ಕಳೆ ನೀನೇ–ಆಯ್ದಕ್ಕಿ ಮಾರಯ್ಯ

೪. ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯ
ಆತನ ಪ್ರಾಣ ನಿಮ್ಮಲ್ಲಿಪ್ಪುದು;
ನಿಮ್ಮ ತಮ್ಮ ಭೇದವನಾರು ಬಲ್ಲರು ಹೇಳಯ್ಯಾ
ಕಪಿಲ ಸಿದ್ಧ ಮಲ್ಲಿನಾಥಯ್ಯ.
ನಿಮ್ಮ ಶರಣ ಬಸವಣ್ಣನ ನಿಲುವ ನೀವೇ ಬಲ್ಲಿರಿ–ಸಿದ್ಧರಾಮೇಶ್ವರ

ಈ ವಚನದ ಭಾವಕ್ಕೆ ಹೋಲುವ ಮಾತು ಬೈಬಲದಲ್ಲಿದೆ. ವ್ಯತ್ಯಾಸವೆಂದರೆ ಏಸು ತಾನೇ ಹೇಳಿಕೊಳ್ಳುತ್ತಾನೆ. ಇಲ್ಲಿ ಸಿದ್ಧರಾಮೇಶ್ವರರು ಬಸವಣ್ಣನವರನ್ನು ಕುರಿತು ಹೇಳುತ್ತಾರೆ. ಯೇಸು ಹೇಳುತ್ತಾನೆ: "ಫಿಲಿಪ್ಪನೇ ನಾನು ಇಷ್ಟು ಕಾಲ ನಿಮ್ಮೊಡ–ನಿದ್ದರೂ ನಾನು ಯಾರೆಂಬುದನ್ನು ನೀನು ಇನ್ನೂ ಅರಿತುಕೊಳ್ಳಲಿಲ್ಲವೆ ? ನಾನು ತಂದೆಯಲ್ಲಿ ಇದ್ದೇನೆ. ತಂದೆಯು ನನ್ನಲ್ಲಿ ಇದ್ದಾನೆ. ಎಂದು ನೀನು ನಂಬುವುದಿಲ್ಲವೆ ?" [ಜಾನ್ 14 : 9–11]

ಬಸವಣ್ಣನವರಿಗೆ ದಿವ್ಯ ಅನುಗ್ರಹವಾಗಿ, ಆದೇಶ ಪಡೆಯುತ್ತಲೇ ಅವರು ಒಂದು ಮಹಿಹ ಹೊತ್ತು ಬಂದವರು, ದೇವನ ಶಕ್ತಿ ತಮ್ಮ ಬೆನ್ನಹಿಂದಿದೆ ಎಂಬುದನ್ನು ಸಂಪೂರ್ಣ ಮನವರಿಕೆ ಮಾಡಿಕೊಂಡರು.

ಹಾವು ಕಿಚ್ಚು ಮುಟ್ಟಿಹ ಶಿಶುವೆಂದು
ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ
ನೀ ಬಪ್ಪೆಯಯ್ಯಾ ಎನ್ನೊಡನೆ, ಕೂಡಲ ಸಂಗಮದೇವ

"ನಾನು ಆಡುವ ಮಾತುಗಳು ನನ್ನವಲ್ಲ ; ಆದರೆ ನನ್ನಲ್ಲಿ ಜೀವಿಸುವ ತಂದೆಯ ಮಾತುಗಳೇ ಆಗಿವೆ. ಆತನು ನನ್ನ ಮುಖಾಂತರವಾಗಿಯೇ ತನ್ನ ಕಾರ್ಯಗಳನ್ನು ನಡೆಸುತ್ತಾನೆ." [ಜಾನ್ 14 : 10–11]

ಆದರೆ ಇದನ್ನು ತಾವಾಗಿಯೇ ಪುನಃ ಪುನಃ ಹೇಳಲಿಲ್ಲ. ಪ್ರೌಢರು ಆತ್ಮೀಯರೂ ಆದ ಶರಣರ ಮುಂದೆ ಮಾತ್ರ ಹೇಳಿದರು,

* "ನಾನೊಂದು ಕಾರಣಕ್ಕೆ ಮರ್ತ್ಯಕ್ಕೆ ಬಂದೆನು. ಬ.ಷ.ಹೆ.ವ, 1165
ಕಡೆಯಲ್ಲಿ ದೇವರ ಮುಂದೆ ನಿವೇದಿಸಿಕೊಂಡರು.

* ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯಲ್ಲ ತಂದೆ
ಇನ್ನು ಹುಟ್ಟಲಾರೆನು ಹೊಂದಲಾರೆನು
ಜನನ ಮರಣವೆಂಬೆರಡಕ್ಕೆ ಹೊರಗಾದೆನಯ್ಯಾ
ನೀವು ಹೇಳಿದ ಮಹಿಹವ ಮಾಡಿದೆ
ಇನ್ನು ಕೂಡಿಕೊಳ್ಳ ಕೂಡಲ ಸಂಗಮದೇವಾ; ಬ.ಷ.ಹೆ.ವ 1373

ಯೇಸುವು ಯಹೂದ್ಯ ಜನಾಂಗದ ಉದ್ಧಾರಕ್ಕೆ, ತಪ್ಪಿಸಿಕೊಂಡು ಕುರಿಗಳಂತಿರುವ ಇಸ್ರೇಲಿಗಳ ಉದ್ಧಾರಕ್ಕೆ ಬಂದವನೆಂಬುದನ್ನು ಸ್ಪಷ್ಟವಾಗಿ ಹೇಳುತ್ತಾನೆ. ಒಂದು ಪ್ರಸಂಗ ಹೀಗಿದೆ.

"ಆಮೇಲೆ ಏಸು ಆ ಪ್ರಾಂತ್ಯವನ್ನು ಬಿಟ್ಟು ಐವತ್ತು ಮೈಲಿಗಳ ದೂರದಲ್ಲಿದ್ದ ತೂರ್ ಸೀಮೋನ್ ಪ್ರದೇಶಕ್ಕೆ ನಡೆದು ಹೋದನು. ಅಲ್ಲಿ ವಾಸವಾಗಿದ್ದ ಕಾನಾನ್ಯರ ಒಬ್ಬ ಹೆಂಗಸು ಆತನ ಬಳಿಗೆ ಬಂದು ಸ್ವಾಮಿ, ರಾಜನಾದ ದಾವೀದನ ಕುಮಾರನೇ, ನನ್ನಲ್ಲಿ ದಯೆ ಇಡು. ನನ್ನ ಮಗಳಿಗೆ ದೆವ್ವ ಹಿಡಿದದೆ, ಅದು ಯಾವಾಗಲೂ ಅವಳಿಗೆ ಕಾಟ ಕೊಡುತ್ತದೆ." ಎಂದು ಬೇಡಿಕೊಂಡಳು. ಆದರೆ ಯೇಸು ಆಕೆಗೆ ಉತ್ತರ ಕೊಡಲಿಲ್ಲ, ಒಂದು ಮಾತನ್ನೂ ಹೇಳಲಿಲ್ಲ. ಆಗ ಆತನ ಶಿಷ್ಯರು, "ಆಕೆಗೆ ಹೋಗಲು ಹೇಳು, ಏಕೆಂದರೆ ಆಕೆ ನಮ್ಮ ಹಿಂದೆ ಕೂಗುತ್ತಾ ಬರುತ್ತಿದ್ದಾಳೆ" ಅಂದರು. ಆಗ ಯೇಸು ಅವಳಿಗೆ, **"ಇಸ್ರೇಲಿನ ಮನೆಯಿಂದ ತಪ್ಪಿಹೋದ ಕುರಿಗಳಿಗಾಗಿ ಮಾತ್ರ ನನ್ನನ್ನು ಕಳುಹಿಸಲಾಗಿದೆ; ಬೇರೆ ಜನರಿಗಾಗಿ ನನ್ನನ್ನು ಕಳುಹಿಸಿಲ್ಲ."** ಎಂದು ಹೇಳಿದನು. ಆದರೆ ಅವಳು ಆತನಿಗೆ ಅಡ್ಡಬಿದ್ದು, "ಸ್ವಾಮಿ ನನಗೆ ಸಹಾಯ ಮಾಡು." ಎಂದು ಮತ್ತೆ ಬೇಡಿಕೊಂಡಳು. ಯೇಸು, **"ಮಕ್ಕಳ ರೊಟ್ಟಿಯನ್ನು ಕಿತ್ತು ನಾಯಿಗಳಿಗೆ ಹಾಕುವುದು ಸರಿಯಲ್ಲ."** ಎಂದು ಹೇಳಿದನು.

ಅವಳು, "ಹೌದು ಸ್ವಾಮಿ, ಅದು ನಿಜ ; ಆದರೆ ನಾಯಿಮರಿಗಳಿಗೆ ತಮ್ಮ ಯಜಮಾನರ ಮೇಜಿನಿಂದ ಕೆಳಗೆ ಬೀಳುವ ರೊಟ್ಟಿ ತುಂಡುಗಳನ್ನು ತಿನ್ನುವ ಅವಕಾಶ ಉಂಟಲ್ಲ." ಎಂದು ಕೇಳಿದಳು.

ಈ ಪ್ರಸಂಗ ಸುವಾರ್ತೆಗಳಲ್ಲೂ ಪ್ರಕಟವಾಗಿದೆ. (ಮ್ಯಾಥ್ಯೂ. 15 : 21 ರಿಂದ 28 ರ ವರೆಗೆ.)

"ಮೊಟ್ಟ ಮೊದಲು ನನ್ನ ಸ್ವಂತ ಕುಟುಂಬದವರಾದ ಯೆಹೂದಿಗಳನ್ನು ನಾನು ಸಂರಕ್ಷಿಸಬೇಕು. ಹೀಗಿರುವಲ್ಲಿ ಮಕ್ಕಳ ಆಹಾರವನ್ನು ನಾಯಿಗಳಿಗೆ ಹಾಕುವುದು ಸರಿಯೆ ? "

ಆದಕ್ಕೆ ಆಕೆಯು "ಸ್ವಾಮಿ ಅದು ನಿಜ, ಆದರೆ ಮೇಜಿನ ಕೆಳಗಿರುವ ನಾಯಿ ಮರಿಗಳಿಗೆ ಮಕ್ಕಳ ತಟ್ಟೆಗಳಿಂದಲೇ ಕೆಲವು ತುಂಡುಗಳನ್ನು ತೆಗೆದುಹಾಕುತ್ತಾರೆ." ಎಂದು ಹೇಳಿದಳು [ಮಾರ್ಕ್. 8 : 25–28]. ಈ ದೃಷ್ಟಿಯಿಂದ ಬಸವಣ್ಣನವರು ಜಗದೋದ್ಧಾರಕರು. ಅವರು ಕೇವಲ ತಾವು ಹುಟ್ಟಿದ ಬ್ರಾಹ್ಮಣ ಸಮಾಜದ ಹಿತವನ್ನಾಗಲೀ, ಕನ್ನಡಿಗರ ಹಿತವನ್ನಾಗಲೀ, ತಮ್ಮ ಧರ್ಮವನ್ನು ಸ್ವೀಕಾರ ಮಾಡಿದ ಲಿಂಗವಂತರನ್ನು ಮಾತ್ರ ಪ್ರೀತಿಸಲಿಲ್ಲ. ಇಡೀ ಮಾನವ ಕುಲವನ್ನೇ ಪ್ರೀತಿಸಿದರು. ಏಸು, ತನ್ನ ಜನಾಂಗವನ್ನು ಮಕ್ಕಳೆಂದು, ಇತರರನ್ನು ನಾಯಿಗಳೆಂದು ಕರೆದನು. ಆದರೆ ಬಸವಣ್ಣನವರು [ಜಗಜಟ್ಟಿ–ಎಲ್ಲಾ ಪ್ರವಾದಿಗಳನ್ನು ಮೀರಿ ನಿಲ್ಲುತ್ತಾರೆ] ಇವನಾರವ ಎನ್ನದೆ ಇವನಮ್ಮವ ಎಂದು ಪ್ರೀತಿಸಿದರು : ಇದಕ್ಕೆ ಸಾಕ್ಷಿ ಸಿದ್ಧರಾ–ಮೇಶ್ವರ ವಚನ :

* ಸ್ವಾಮಿ ಸ್ವಾಮಿ, ಭವಿಯ ಭಕ್ತನ ಮಾಳ್ಪುದು
ಯೋಗ್ಯವೋ ಅಯೋಗ್ಯವೋ
ಆಗಮ ವಿಚಾರದಿಂದ ಆಗದಿಹುದೆಂಬ ಸಿದ್ಧಾಂತ
ಇಲ್ಲಿ, ಪರಮಗುರು ಸಂಗನ ಬಸವಯ್ಯ
ಸರ್ವಜಾತಿಯ ಲಿಂಗದ ರಾಶಿಯ ಮಾಡಿದ ಸಿದ್ಧಾಂತ
ಕಪಿಲ ಸಿದ್ಧ ಮಲ್ಲಿಕಾರ್ಜುನಾ.

* ಜಗದ್ಧಿತಾರ್ಥಕ್ಕಾಗಿ ಮರ್ತ್ಯಕ್ಕವತರಿಸಿದ ನಮ್ಮ ಬಸವಣ್ಣ–ಅಕ್ಕ

* ಮರ್ತ್ಯಲೋಕದ ಜಡರುಗಳ ಕತ್ತಲೆ ಹರಿಯಲಿಕ್ಕೆ
ಕಲ್ಯಾಣದಲ್ಲಿ ಕಟ್ಟಿತ್ತು ಮಹಾಮಠವು–ಸಿದ್ಧರಾಮೇಶ್ವರ.

ಹೀಗೆ ಬಸವಣ್ಣನವರು ಯಾವುದೇ ಒಂದು ದೇಶ, ಜನಾಂಗವನ್ನು ಗುರಿಯಾಗಿಟ್ಟುಕೊಳ್ಳದೆ ಇಡೀ ಮಾನವ ಕುಲಕೋಟಿಯ ಹಿತವನ್ನೇ ಗುರಿಯಾಗಿ ಇಟ್ಟುಕೊಂಡರು.

ತತ್ತ್ವಜ್ಞಾನ ದೃಷ್ಟಿಯಿಂದ ಏಸುವಿನ ಬೋಧೆಯು ಬೌದ್ಧಿಕ ದಾರಿದ್ರ್ಯವನ್ನು ಪ್ರದರ್ಶಿಸುತ್ತದೆ, ಇದಕ್ಕೆ ಬೈಬಲಿನಲ್ಲಿ ಹಲವಾರು ಉದಾಹರಣೆಗಳಿವೆ, ಅದರಲ್ಲಿ

ಒಂದನ್ನು ಪ್ರಸ್ತಾಪಿಸುವೆ.

"ಯೇಸು ಹೀಗೆ ನಡೆದುಕೊಂಡು ಹೋಗುತ್ತಿರುವಾಗ ಹುಟ್ಟುಕುರುಡನೊಬ್ಬನನ್ನು ಕಂಡನು. ಆತನ ಶಿಷ್ಯರು, "ಗುರುವೇ ಇವನು ಕುರುಡನಾಗಿ ಹುಟ್ಟಿರುವುದಕ್ಕೆ ಕಾರಣವೇನು ? ಇದು ಅವನ ಸ್ವಂತ ಪಾಪದ ಫಲವೆ ? ಅಥವಾ ಅವನ ತಾಯಿತಂದೆಗಳ ಪಾಪದ ಫಲವೆ ?" ಎಂದು ಕೇಳಿದರು. ಅದಕ್ಕೆ ಯೇಸು "ಅವನ ಪಾಪವಾಗಲಿ ಅವನ ತಾಯಿತಂದೆಗಳ ಪಾಪವಾಗಲಿ ಇದಕ್ಕೆ ಕಾರಣವಲ್ಲ; ದೇವರ ಶಕ್ತಿಯನ್ನು ಪ್ರಕಟಿಸುವುದಕ್ಕೆ ಹೀಗಾಗಿದೆ." [ಯೋಹಾನ 9 : 1–4]

ಇದು ತಾತ್ತ್ವಿಕ ಉತ್ತರವೇ ಅಲ್ಲ. ಜಗತ್ತಿನಲ್ಲಿ ಅಸಂಖ್ಯಾತ ಕುರುಡರು ಇದ್ದಾರೆ. ಅವರು ಏಕೆ ಕುರುಡರಾಗಿದ್ದಾರೆ ? ಅವರೆಲ್ಲ ದೇವರ ಮಹಿಮೆ ಪ್ರಕಟಿಸುವರೊ ? ಮಾನವನ ಕೊರತೆಗಳು ದೇವರ ಉತ್ತಮತ್ವಕ್ಕೆ ಕೊರತೆಯನ್ನುಂಟು ಮಾಡುವವೇ ವಿನಾ ಹಿರಿಮೆಯನ್ನಲ್ಲ. ಇಲ್ಲಿ ಏಸು ಭೇಟಿಯಾದ ಒಬ್ಬ ಕುರುಡನ ಪ್ರಶ್ನೆ ಮುಖ್ಯವಲ್ಲ; ಕುರುಡುತನದಂತಹ ವಿಕಲತೆಗೆ ಕಾರಣವೇನು ಎಂಬ ಶಿಷ್ಯರ ಪ್ರಶ್ನೆ ತಾತ್ತ್ವಿಕವಾದುದು. ಹೀಗಾಗಿಯೇ ಬೈಬಲ್ ಸೃಷ್ಟಿಯ ಕ್ರಮ ದೇವರ ಸ್ವರೂಪ ಮುಂತಾದುವುಗಳಲ್ಲಿ ತತ್ತ್ವಜ್ಞಾನದ ತಾರ್ಕಿಕ ಏಟುಗಳನ್ನು ಎದುರಿಸಲಾರದು.

ಏಸುವು ಕರುಣೆಗೆ ಹೆಸರಾಗಿರುವ ಪ್ರವಾದಿ. ಯಾರಾದರೂ ಒಂದು ಕೆನ್ನೆಗೆ ಏಟುಕೊಟ್ಟರೆ, ಇನ್ನೊಂದು ಕೆನ್ನೆ ಕೊಡು; ಮೇಲಂಗಿಯನ್ನು ಕಿತ್ತು ಕೊಂಡರೆ ಒಳ ಅಂಗಿಯನ್ನೂ ಕೊಡು ಎನ್ನುವವನು. (ಲೂಕ್ 6 : 27) ಆದರೆ ಮತ್ತೊಂದು ಸನ್ನಿವೇಶದಲ್ಲಿ (ಲೂಕ್ 10 : 12 ಮತ್ತು 9 : 5) ಹೀಗೆ ಹೇಳುವನು. "ನಿಮ್ಮನ್ನು (ಅಂದರೆ ಧರ್ಮಬೋಧಕರನ್ನು) ಯಾವ ಪಟ್ಟಣದವರಾದರೂ ಸೇರಿಸಿಕೊಳ್ಳದಿದ್ದರೆ ಆ ಪಟ್ಟಣದ ಬೀದಿಗಳಿಗೆ ಬಂದು "ನಮ್ಮ ಕಾಲುಗಳಿಗೆ ಹತ್ತಿರುವ ನಿಮ್ಮ ಪಟ್ಟಣದ ಧೂಳನ್ನು ಒರೆಸಿಬಿಡುತ್ತೇವೆ. ಅದು ನಿಮಗೆ ಬರಲಿರುವ ದುರ್ಗತಿಗೆ ಸಾಕ್ಷಿಯಾಗಿರಲಿ ; ಆದಾಗ್ಯೂ ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದದೆ ಎಂಬುದು ನಿಮಗೆ ತಿಳಿದಿರಲಿ" ಎಂದು ಹೇಳಿರಿ. ನ್ಯಾಯ ತೀರ್ಪಿನ ದಿನದಲ್ಲಿ ಸೋದೋಮಿನ ಗತಿಗಿಂತಲೂ ಇಂಥ ಊರಿನ ಸ್ಥಿತಿಯು ಭಯಂಕರವಾಗಿರುವುದು.

ಬಸವಣ್ಣನವರಾದರೋ, "ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯ ; ತನಗಾದ ಆಗೇನು ಅವರಿಗಾದ ಚೇಗೆಯೇನು. ತನುವಿನ ಕೋಪ ತನ್ನ ಹಿರಿಯತನದ ಕೇಡು ; ಮನದ ಕೋಪ ತನ್ನ ಅರುಹಿನ ಕೇಡು. " ಎಂದು ಬೋಧಿಸುತ್ತಾರೆ. ಇನ್ನೊಂದು ವಚನದಲ್ಲಿ, 'ಬೈದವರೆನ್ನ ಬಂಧುಗಳೆಂಬೆ' ಎನ್ನುತ್ತಾರೆ.

ಶಿಷ್ಯರು—ಶರಣ ಸಂದೋಹ

ಏಸುಕ್ರಿಸ್ತನು ಆರಿಸಿಕೊಂಡದ್ದು 12 ಮಂದಿ ಶಿಷ್ಯರನ್ನು. ಅದರಲ್ಲಿ ಯೂದ ಎಂಬುವವನು ದುಡ್ಡಿನ ಆಸೆಗೆ ಗುರುವಿಗೆ ದ್ರೋಹ ಬಗೆದನು. ಉಳಿದ ಹನ್ನೊಂದು ಮಂದಿ ಯಹೂದ್ಯರ ಕಿರುಕುಳದಿಂದ ತಪ್ಪಿಸಿಕೊಳ್ಳಲು ತಾವು ಏಸುವಿನ ಶಿಷ್ಯರಲ್ಲವೆಂದು, ಆತನು ತಮಗೆ ಗೊತ್ತಿಲ್ಲವೆಂದು ಹೇಳಿದ್ದುಂಟು. ಹಾಗೆ ಹೇಳಿ ನಂತರ ಪೀಟರ್ ಎನ್ನುವವನು ಪಶ್ಚಾತ್ತಾಪದಿಂದ ಅಳುವುದನ್ನು ನೋಡುತ್ತೇವೆ.

ಆದರೆ ಬಸವ ಪಥದ ಶರಣರು ಧೈರ್ಯವಾಗಿ ಪ್ರಾಣ ತೆತ್ತರು ; ಎಂಥಾ ಪ್ರಸಂಗದಲ್ಲೂ ನಿರಾಕರಿಸಲಿಲ್ಲ ಮತ್ತು ಸಾಹಿತ್ಯವನ್ನು ನಾಶಮಾಡಬೇಕೆಂದು ಜಾತಿವಾದಿಗಳ ಪ್ರಚೋದನೆಯಿಂದ ಸೈನಿಕರು ಬೆನ್ನುಹತ್ತಿದಾಗ ಎದೆಗುಂದದೆ ಹೋರಾಡಿ, ಸಾಹಿತ್ಯವನ್ನು ರಕ್ಷಿಸಿದರು. ಅದಕ್ಕೆ ಕಾದರವಳ್ಳಿ ಮತ್ತು ಮುರುಗೋಡದ ಬಳಿ ನಡೆದ ಹೋರಾಟಗಳೇ ಸಾಕ್ಷಿ.

ಏಸುವಿನ ಶಿಷ್ಯರಲ್ಲಿ ಲ್ಯೂಕ್ ಎನ್ನುವವನು [ಈತನೂ ಸುವಾರ್ತೆ ಬರೆದಿದ್ದಾನೆ] ವೈದ್ಯನು. ಬಾಕಿಯುವರೆಲ್ಲ ಸಾಮಾನ್ಯರು; ಮೀನು ಹಿಡಿಯುವವರು, ಬಲೆ ನೇಯು-ವವರು ಮುಂತಾದವರು. [ಆದರೆ ಅವರ ಸೇವೆಯನ್ನು ಕೊಂಡಾಡಬೇಕು. ಏಸುವಿನ ಒಡನಾಡಿ ಅವರ ನೆನಪಿನ ಸಂಪುಟದಲ್ಲಿ ಇಟ್ಟುಕೊಂಡ ಅನುಭವಗಳೇ ಅವರ ಸುವಾರ್ತೆಗಳಾಗಿ ಬೈಬಲ್ ಆಗಿರುವುದು.] ಏಸುವು ಸಾಂಕೇತಿಕವಾಗಿ ಹೇಳುತ್ತಿದ್ದ ದೃಷ್ಟಾಂತಗಳು, ರೂಪಕಗಳು ಅವರಿಗೆ ಅರ್ಥವಾಗದೆ ಪುನಃ ಪುನಃ ಅವುಗಳ ಅರ್ಥವನ್ನು ಪೆದ್ದುಪೆದ್ದಾಗಿ ಕೇಳುವುದನ್ನು ಗಮನಿಸಬಹುದು * ["ಇದನ್ನು ಗ್ರಹಿಸುವುದು ಬಹು ಕಷ್ಟ. ಇದರ ಅರ್ಥವನ್ನು ತಿಳಿಸಬಲ್ಲವರು ಯಾರು ?" ಎಂದು ಮಾತಾಡಿಕೊಂಡರು. ಯೋಹಾನ 6 : 60] ಕಡೆಯಲ್ಲಿ ಹಿಡಿದುಕೊಂಡು ಹೋಗಿ ಶಿಕ್ಷಿಸುವ ಹುನ್ನಾರಿಗೆ ತುಸು ಮೊದಲು ಏಸು ಬರಲಿರುವ ಹಿಂಸೆಯನ್ನು ಊಹಿಸಿ, ಪ್ರಾರ್ಥನೆ ಮಾಡಿ ಧೈರ್ಯ ತಂದುಕೊಳ್ಳಲು ಪ್ರಯತ್ನಿಸುವನು. ಆಗ "ನೀವು ನಿದ್ದೆ ಮಾಡಬೇಡಿರಿ, ಎಚ್ಚರವಾಗಿರಿ." ಎಂದು ಎಷ್ಟು ಹೇಳಿದರೂ ಅಂಥ ಉದ್ವೇಗದ ಮಧ್ಯದಲ್ಲೂ ಅವರು ನಿದ್ರಿಸುವರು. ಇದು ಅವರ ಬೌದ್ಧಿಕ ಮಟ್ಟವನ್ನು ಸೂಚಿಸುತ್ತದೆ. ಒಂದೆರಡು ಸಲವಂತೂ ಏಸುವು ನಾನು ನಿಮಗೆ ಊಟ ಕೊಟ್ಟದ್ದರಿಂದ ನನ್ನೊಡನಿರಬೇಕೆಂದು ನೀವು ಇಷ್ಟಪಡುತ್ತಿರುವಿರೇ ಹೊರತು ನನ್ನ ಮೇಲೆ ನಂಬಿಕೆ ಇಟ್ಟಿರುವುದರಿಂದಲ್ಲ. ಆದರೆ ನೀವು ಆಹಾರದಂಥ ಕೆಟ್ಟು ಹೋಗುವ ವಿಷಯಗಳಿಗಾಗಿ ಚಿಂತೆ ಮಾಡಬಾರದು. ಸ್ವರ್ಗದಿಂದ ಬಂದಿರುವ ನಾನು ಕೊಡುವಂಥ ನಿತ್ಯಜೀವವನ್ನು ಹುಡುಕುವುದಕ್ಕಾಗಿ ನಿಮ್ಮ ಶಕ್ತಿಯನ್ನು ವ್ಯಯ

ಮಾಡಿರಿ." ಎನ್ನುವನು [ಜಾನ್. 6 : 26–27] "ಆದರೆ ನಿಮ್ಮಲ್ಲಿ ಕೆಲವರು ನನ್ನನ್ನು ನಂಬುವುದಿಲ್ಲ" [ಯೋಹಾನ 9 : 64]

ಒಮ್ಮೆಯಂತೂ, "ಎಲೈ ಅಲ್ಪವಿಶ್ವಾಸಿಗಳೇ, ನಿಮಗೆ ನಂಬಿಕೆ ಬರುವಂತೆ ನಾನು ಇನ್ನೆಷ್ಟು ದಿನ ನಿಮ್ಮೊಂದಿಗಿರಲಿ ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ?" ಎನ್ನುವನು. [ಮಾರ್ಕ್ 9 : 19] [ಗುರುವಿನಿಂದ ಬೈಸಿಕೊಂಡದ್ದನ್ನು ಪ್ರಾಮಾಣಿಕವಾಗಿ ವರದಿ ಮಾಡಿರುವ ಈ ಮುಗ್ಧ ಸಂತರ ನಿರ್ಮಲತೆಯನ್ನು ಮೆಚ್ಚಲೇಬೇಕು.]

ಜನ ಸಾಮಾನ್ಯರೂ ಅಷ್ಟೆ; ಏಸು ಮಾಡುವ ಅದ್ಭುತ ಕಾರ್ಯಗಳಿಗಾಗಿ [ಸತ್ತವರನ್ನು ಬದುಕಿಸುವುದು, ರೋಗ ಗುಣಪಡಿಸುವುದು, ಕಣ್ಣು ಬರಿಸುವುದು] ಆತನನ್ನು ಸುತ್ತುವರಿಯುವುದನ್ನು ಕಾಣುತ್ತೇವೆ. ಆತ ಕೊಡುವ ಜ್ಞಾನಕ್ಕಾಗಿ ಸಮೀಪಿಸು-ತ್ತಿದ್ದವರ ಸಂಖ್ಯೆ ಕಮ್ಮಿಯೆ !

ಈ ಎರಡೂ ದೃಷ್ಟಿಗಳಿಂದ ಬಸವಣ್ಣನವರ ಸಾಧನೆ ಬಹು ದೊಡ್ಡದು. ಅವರ ಸುತ್ತ ಸಮಾವೇಶವಾದ ಅಲ್ಲಮ ಪ್ರಭು, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಾಚಿದೇವ, ಮೋಳಿಗೆ ಮಾರಯ್ಯ ಒಬ್ಬೊಬ್ಬರೂ ದಾರ್ಶನಿಕ ದಿಗ್ಗಜಗಳೇ ! ಅವರ ಸಾಧನೆ ಏನು ? ಸಾಹಿತ್ಯವೇನು ? ಒಬ್ಬೊಬ್ಬರ ಸಾಹಿತ್ಯವನ್ನು ಇಂದು ವಿಶ್ಲೇಷಿಸಲು ಒಬ್ಬೊಬ್ಬರು ತಮ್ಮ ಇಡೀ ಜೀವನವನ್ನೇ ಮುಡಿಪಿಟ್ಟರೂ ಆಗದು. ಅಂತಹ ತಾರಾ ಪುಂಜ. !

ಇನ್ನು ಜನಾಂಗ ನಿರ್ಮಾಣ, ವೈಚಾರಿಕ ಜಾಗೃತಿ ಅತ್ಯದ್ಭುತ, ಏಸುವು ಹೇಳಿದ್ದನ್ನು ಕೇಳುತ್ತ, ಅವನ ಜೀವಿತಾನಂತರ ಎಲ್ಲ ಶಿಷ್ಯರು ಕ್ರೈಸ್ತ ಧರ್ಮವನ್ನು ಹಬ್ಬಿಸಿದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಮುಖ್ಯ ಶರಣರು ಮಾತ್ರವಲ್ಲದೆ ಸಾಮಾನ್ಯ ಅನುಯಾಯಿಗಳು ಸಹ ಪಾಲ್ಗೊಂಡು ಚರ್ಚಿಸಿದರು, ಪುನಃ ತಾವೂ ಸಾಹಿತ್ಯ ರಚಿಸಿದರು.

ಭಾವುಕರನ್ನು ಆಕರ್ಷಿಸಲು ಅಥವಾ ಭಾವುಕ ಭಕ್ತರು ಸ್ವಧರ್ಮದಿಂದ ದೂರ ಹೋಗದಿರಲು ಪವಾಡಗಳನ್ನು ಹೆಣೆದು ಸಿಂಗಿರಾಜನಂತಹವರು ಕಾವ್ಯ ಬರೆದಿರಬಹುದಾದರೂ, ಬಸವಣ್ಣನವರ ಜೀವಿತಕಾಲದಲ್ಲಿ ಹಲವಾರು [ವೈಚಾರಿಕ] ಪವಾಡಗಳು ನಡೆದು ಬಸವಣ್ಣನವರ ಕೀರ್ತಿಯನ್ನು ವಿಸ್ತರಿಸಿದವಾದರೂ [ಲಿಪಿ ಓದಿ ನಿಧಿ ತೆಗೆದುದು; ಭಾವಿಯಲ್ಲಿ ಬಿದ್ದು ಸತ್ತಿದ್ದ ಸಹಪಾಠಿ ಚಾಮುನನ್ನು ಬಾಲಕನಾಗಿರುವಾಗಲೇ ಬಸವಣ್ಣ ಬದುಕಿಸಿದ್ದು, ಮೇದಾರ ಕೇತಯ್ಯನವರು ಬಿದಿರು ಕಡಿಯುವಾಗ ಬಿದ್ದು, ಪ್ರಾಣ ಬಿಟ್ಟಾಗ ಪುನಃ ಬದುಕಿಸಿದ್ದು, ಕಟ್ಟಿಕೊಂಡು ಬಂದ ಬದನೇಕಾಯಿಗಳನ್ನು ಲಿಂಗವಾಗಿ ಮಾಡಿದ್ದು] ಜನರು ಬಸವಣ್ಣನವರ ಬಳಿಗೆ ಧಾವಿಸಿದ್ದು ಕೇವಲ ಪವಾಡದಿಂದ ಆಕರ್ಷಿ

ತರಾಗಿ ಅಲ್ಲ 1. ಅಪಾರ ಪ್ರೀತಿಗೆ ಮನಸೋತು ಮತ್ತು 2. ವಿಚಾರ ವೈಭವಕ್ಕೆ ಮಾರುಹೋಗಿ. ಸಿದ್ಧರಾಮೇಶ್ವರರಂಥವರೇ ಮರುಳರಂತೆ ಕೊಂಡಾಡಬೇಕಾದರೆ ?

ಆರ್ಯರ ವಚನಕ್ಕೆ

ಅಷ್ಟಾವರಣದ ಸಂಗನ ಬಸವಯ್ಯನ ವಚನವ ಕೇಳಿ.
ಪದ್ಮಿನಿಯಲ್ಲಿ ಬೆರಗಾದ ಕಾಮಿಯಂತೆ,
ಎರೆದು ನಿದ್ರಿಪ ಬಾಲಕನಂತೆ.
ಕಾಯುವ ದಣಿಸಿದ ಕೃಷೀವಲನ ನಿದ್ರೆಯಂತೆ
ಪರವಶನಾದೆ ಕಾಣಾ, ಕಪಿಲಸಿದ್ಧಮಲ್ಲಿಕಾರ್ಜುನಾ. [೮೫೯]

ಬಸವಣ್ಣನವರ ವ್ಯಕ್ತಿತ್ವ ಸರ್ವಾಂಗ ಪರಿಪೂರ್ಣವಾಗಿ ವಿಕಸನಗೊಂಡಿತ್ತು ಎಂಬುದನ್ನು ಅರಿತಾಗ ನಮಗೆ ಅತೀವ ಹೆಮ್ಮೆಯುಂಟಾಗುತ್ತದೆ.

ಬಸವಣ್ಣನವರು ಶ್ರೇಷ್ಠ ಸಂಸ್ಥಾ ನಿರ್ಮಾತೃ. ಏಸುವು ಚರ್ಚ್ ಕಲ್ಪನೆಯನ್ನೇನೂ ಕೊಡಲಿಲ್ಲ. ಒಂದು ಬಂಡೆಯ ಮೇಲೆ ಪ್ರಪ್ರಥಮ ಸಭೆಯನ್ನು ನಡೆಸುತ್ತಾನೆ. ಇದನ್ನೇ ಮಾದರಿಯಾಗಿಟ್ಟುಕೊಂಡು ಮುಂದಿನ ಪ್ರಚಾರಕರು ಚರ್ಚ್ ಕಲ್ಪನೆ ರೂಢಿಸಿಕೊಂಡರು. ಬಸವಣ್ಣನವರೋ ಅತ್ಯಂತ ಅದ್ಭುತ ಕಲ್ಪನೆಯ ಅನುಭವ ಮಂಟಪವನ್ನು ಸಾಕಾರಗೊಳಿಸಿದರು. ಏಸುವು ತಾನೊಬ್ಬನೇ ಗುರುವಾಗಿ ಮೇಲೇರಿದನು.

ಬಸವಣ್ಣನವರು ಪ್ರಮಥಗಣವೆಂದು ಹೆಸರಿಸಬಹುದಾದ ಕೆಲವರನ್ನಷ್ಟೆ ಅಲ್ಲದೆ ಅಸಂಖ್ಯಾತರನ್ನು ತೆಗೆದುಕೊಂಡು ಮೇಲೇರಿದರು.

ಏಸುವು ತನ್ನ ಜೀವಿತಕಾಲದಲ್ಲಿ ಕೇವಲ ಯಹೂದ್ಯರ (ತಾನು ಹುಟ್ಟಿದ ಧರ್ಮ) ಮನೆಗೆ ಮಾತ್ರ ಊಟಕ್ಕೆ ಹೋಗುತ್ತಿದ್ದ ; ಅವರ ಸಭೆಗಳಲ್ಲಿ ಬೋಧಿಸುತ್ತಿದ್ದ ; ಅವರಿಗಷ್ಟೆ ಉಪಕಾರ ಕಾರ್ಯಗಳನ್ನು ಮಾಡುತ್ತಿದ್ದ. ಬಹಳವೆಂದರೆ ಅವರಲ್ಲೇ ಪಾಪದವರು ಎಂದು ಪರಿಗಣಿಸುತ್ತಿದ್ದ ಉದ್ಯೋಗಿಗಳು (ಉದಾ ಸುಂಕದ ಅಧಿಕಾರಿಗಳು) ಮನೆಗೆ ಹೋಗಿ ಉಣ್ಣುತ್ತಿದ್ದುದೇ ದೊಡ್ಡದು. ಯಹೂದಿಯೇತರರಿಗೆ ದೀಕ್ಷಾಸ್ನಾನ ಮಾಡಿಸಿದ್ದು, ಯಹೂದಿಯೇತರರೊಡನೆ ಆಹಾರ ಸ್ವೀಕರಿಸಿದ್ದು ಏಸುವಿನ ನಂತರ, ಆತನ ಶಿಷ್ಯರು. [ಅಪೋಸ್ತಲರ ಕೃತ್ಯಗಳು 10 ; 9–48] ಪೇತ್ರ ಎನ್ನುವ ವ್ಯಕ್ತಿ ಕೈಸರ್ಯೆಯಾದ ಕೊರ್ನೇಲ್ಯ ಎಂಬ ಯಹೂದ್ಯೇತರನಿಗೆ ಕೊಟ್ಟುದೇ ಪ್ರಥಮ ಪ್ರಸಂಗವಾಗಿ ಕಾಣಬರುತ್ತದೆ.

ಆದರೆ ವಿಶ್ವಗುರು ಬಸವಣ್ಣನವರು ತಮ್ಮ ಜಾತಿಯವರ ಸುಧಾರಣೆಗಾಗಿ

ಮಾತ್ರ ಯತ್ನಿಸದೆ, ಅವರ ಹಿತವನ್ನಷ್ಟೇ ಚಿಂತಿಸದೆ ಎಲ್ಲರಿಗೂ ಧರ್ಮವನ್ನು ಕೊಟ್ಟರು. ಹಾಗೆ ದೀಕ್ಷೆ ಹೊಂದಿದ ಕಂಬಳಿ ನಾಗಿದೇವ ಎಂಬ ಶರಣನ ಮನೆಗೆ ಹೋಗಿ ಪೂಜೆ ಮಾಡಿ, ಪ್ರಸಾದವನ್ನು ಸ್ವೀಕರಿಸಿದರು. ಇದು ಸನಾತನಿಗಳನ್ನು ಸಿಟ್ಟಿಗೆಬ್ಬಿಸಿದ್ದು, ರಾಜನಿಗೆ ಪ್ರಚೋದನೆ ನೀಡಿ ಬಸವಣ್ಣನವರನ್ನು–ಕಂಬಳಿ ನಾಗಿದೇವನ್ನು ಪ್ರಶ್ನಿಸಿದ್ದು, ಬಸವಣ್ಣನವರು ತಾತ್ತ್ವಿಕ–ತಾರ್ಕಿಕ ಉತ್ತರ ನೀಡಿದರೆ ನಾಗಿದೇವ ತನ್ನ ಸಜ್ಜನಿಕೆಯನ್ನು ಪ್ರದರ್ಶಿಸಿ ರಾಜನಿಂದ ಸನ್ಮಾನ ಹೊಂದಿದುದು ರೋಚಕ ಪ್ರಸಂಗಗಳು. ಹರಿಹರ ಕವಿ ಅದನ್ನು ಅತ್ಯಂತ ರಂಜನೀಯವಾಗಿ ಬಣ್ಣಿಸಿದ್ದಾನೆ.

ಪೇತ್ರನು ಅನ್ಯ ಜನರಿಗೆ ದೀಕ್ಷೆ ಕೊಟ್ಟು ಅವರೊಡನೆ ಉಂಡಾಗ, ಮತಾಂಧ ಯಹೂದಿಗಳು ವಿಚಾರಣೆಗೆ ಒಳಪಡಿಸಿದಾಗ ಕೊಡುವ ಉತ್ತರ ಪೌರಾಣಿಕ ಕಥೆಯಂತಿದೆ. ಆಕಾಶದಿಂದ ದೇವರ ಸಂದೇಶ ಬಂದಿತು ; ಒಂದು ಗಂಟು ಬಂದಿತು ; ದೇವರ ಆಜ್ಞೆಯಾಯಿತು ಎಂದು ವಿವರಿಸುವನು. ಆದರೆ ಬಸವಣ್ಣನವರು ಇಂಥ ಅವೈಜ್ಞಾನಿಕ ಸಮಜಾಯಿಷಿ ನೀಡದೆ ವೈಚಾರಿಕ ಉತ್ತರ ಕೊಡುವರು, "ಹರನನರಿಯದವನೆ ಹೊಲೆಯ, ಅರಿತವನೇ ಕುಲಜ" ಎಂದು, ವ್ಯಕ್ತಿ ದೊಡ್ಡವನಾಗುವುದು ವಿದ್ಯೆ, ಗುಣ, ಜ್ಞಾನ, ಧರ್ಮ, ಆಚಾರ, ಶೀಲಗಳಿಂದ ಎಂದು ಹೇಳಿ, ಅದಕ್ಕೆ ಪ್ರತ್ಯಕ್ಷರೂಪದಂತಿದ್ದ ಕಂಬಳಿನಾಗಿದೇವನನ್ನು ಕರೆಸಿ, ತೋರಿಸುವರು. ಆತನು ರಾಜ ಬಿಜ್ಜಳನ ಮುಂದೆ ಮಾತನಾಡಿ, ಮೆಚ್ಚುಗೆ ಗಳಿಸಿಕೊಂಡು ಸನ್ಮಾನಿತನಾಗಿ ಹೋಗುವನು. ಇದರಿಂದ ಬಸವಣ್ಣನವರ ಜ್ಞಾನದ ನಿಲುವು ತಿಳಿದು ಬರುವುದು. "ದೇವರು ಹೇಳಿದ್ದಕ್ಕೆ ಹೀಗೆ ಮಾಡಿದೆ." ಎಂದು ಪೇತ್ರನು ಹೇಳಿದರೆ "ನನ್ನ ಅಂತರಾತ್ಮವು ಈ ರೀತಿ ಹೇಳುತ್ತಿದೆ. ನೀನೂ ಆಲೋಚಿಸು." ಎಂದು ರಾಜನಿಗೆ ಹೇಳುವರು,

ಪವಿತ್ರಾತ್ಮ—ಜಂಗಮ

ಬಸವಣ್ಣನವರ ಪರಿಕಲ್ಪನೆಯಲ್ಲಿ 'ಜಂಗಮ' ಒಂದು ವಿಶೇಷ ತತ್ತ್ವ. ಕ್ರೈಸ್ತ ಧರ್ಮದಲ್ಲಿ ಪವಿತ್ರಾತ್ಮ (holy spirit) ದ ಪರಿಕಲ್ಪನೆಯೊಡನೆ ಹೆಚ್ಚಿನ ಹೋಲಿಕೆ ಇದೆ. ವಚನ ಸಾಹಿತ್ಯದಲ್ಲಿ 9 ಅರ್ಥಗಳಲ್ಲಿ ಜಂಗಮ ಪದ ಬಳಕೆಯಾಗಿದೆ, ಇಲ್ಲಿ ಎರಡು ಅರ್ಥಗಳನ್ನು ಗಮನದಲ್ಲಿ ಇರಿಸಿಕೊಂಡು ಹೋಲಿಸುವಾ.

1. ಧರ್ಮ ಪ್ರಚಾರಕರು.
2. ಸಮಾಜ–ಗಣ ಸಮೂಹ.

ಲಿಂಗವಂತ ಧರ್ಮದ ಸಂದೇಶವನ್ನು ಹೊತ್ತು ಊರಿಂದ ಊರಿಗೆ ಸಂಚರಿಸುತ್ತ ಧರ್ಮ–ನೀತಿಗಳನ್ನು ಬೋಧೆ ಮಾಡುವವನು ಜಂಗಮ.

1. ನೀನು ಭವವ ಕೊಂದಿಹೆನೆಂದು ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ.

2. ದೇವಾ, ಜಂಗಮವಾಗಿ ಬಂದು ಎನ್ನ ಮನದ ಸೂತಕವ ಕಳೆಯಾ-[೩೮೯]

3. ಜಂಗಮವಾಗಿ ಬಂದು ಜರಿದು ಶೂಲವನಿಳುಹಿ ಪ್ರಸಾದದ ಮದ್ದನಿಕ್ಕಿ ಸಲಹು [೩೮೭]

ಜಂಗಮ ಎಂದರೆ ಚಲಿಸುವಂತಹುದು, ಚೈತನ್ಯ ಉಳ್ಳದು. ಆದ್ದರಿಂದ ಜಗತ್ತಿನಲ್ಲಿರುವ ಚೈತನ್ಯಮಯವಾದ ಜೀವ ಸಮೂಹವೆಲ್ಲವೂ ಜಂಗಮವೆ. ಸಮಾಜದ ಅನುಯಾಯಿಯಾಗಿರುವ ಗಣ ಸದಸ್ಯನು ಜಂಗಮ. ಜಂಗಮನು ಎಂದು ಬಂದಾಗ ಇದು ವ್ಯಕ್ತಿವಾಚಕ; ಜಂಗಮದ ಎಂದು ಬಂದಾಗ ಸಮೂಹವಾಚಕ ಎಂದು ತಿಳಿದು ನಾವು ವಚನಗಳನ್ನು ಅರ್ಥಮಾಡಬಹುದು,

1. ನಾನೊಬ್ಬನೇ ಭಕ್ತನು,
ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ, ನೀನೆ ಅಯ್ಯಾ ಕೂಡಲ ಸಂಗಮದೇವಾ. [೮೯೩]

2. ಉಂಬ ಜಂಗಮ ಬಂದರೆ ನಡೆ ನಡೆ ಎಂಬರು.
ಇಲ್ಲಿ ಉಂಬ ಜಂಗಮ ಎಂದರೆ ಹಸಿದಿರುವ ಒಬ್ಬ ಮಾನವ ಜೀವಿ ಎಂದರ್ಥ.
ಹಸಿದಿರುವ ಧರ್ಮ ಬಂಧು ಎಂದೂ ಸಹ ಅರ್ಥ.

3. ಶಿವಭಕ್ತರೇ ಅಧಿಕರು ನೋಡಯ್ಯಾ
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ. [೩೯೩]

ಶಿವಭಕ್ತರು ಅನ್ನುವ ಪದ ಸಮಾಜದ ಅನುಯಾಯಿಗಳ ಗುಂಪನ್ನು ಸಂಕೇತಿಸಿದರೆ, ಜಂಗಮನು ಅವರಲ್ಲಿ ಹೆಚ್ಚಿನ ಗೌರವ ಸ್ಥಾನ ಪಡೆದವನು ಎಂಬುದನ್ನು ಸಂಕೇತಿಸುತ್ತದೆ.

ಆದ್ದರಿಂದ ಜಂಗಮ ಪದವನ್ನು ಸರಿಯಾದ ಹಿನ್ನೆಲೆಯಲ್ಲಿ ಅರ್ಥ ಮಾಡುತ್ತಾ ಹೋಗಬೇಕು. ಈ ಸೃಷ್ಟಿಯ ಮೇಲಿರುವ ಅಪಾರ ಪ್ರೀತಿಯಿಂದ ಸೃಷ್ಟಿಕರ್ತನು ಬಸವ ಗುರುವಾಗಿ ಬಂದು ಮಾರ್ಗ ತೋರಿದನು; ಇಷ್ಟಲಿಂಗವಾಗಿ ಅಂಗದ ಮೇಲೆ ನೆಲೆಸಿ ಪೂಜೆಯನ್ನು ಹೊಂದುವನು, ಜಂಗಮವಾಗಿ ಧರ್ಮಪಥದಲ್ಲಿ ಸಹ ಪಥಿಕನಾಗಿ ಕೈಹಿಡಿದು ನಡೆಸುವನು. ಇದೇ ಅರ್ಥದಲ್ಲಿ ಕ್ರೈಸ್ತ ಧರ್ಮದಲ್ಲಿ Trinity ಎಂಬ ತತ್ತ್ವಗಳು ಬರುತ್ತವೆ. ದೇವರು–ದೇವರ ಮಗ–ಪವಿತ್ರಾತ್ಮರು. ದೇವರು ಈ ಜಗತ್ತಿನ ಮೇಲೆ ಅಪಾರ ಕರುಣೆಯಿಟ್ಟು ತನ್ನ ಒಬ್ಬನೇ (?) ಮಗನನ್ನು ಕಳಿಸಿದನು. ಆ ದೇವರು–ಆತನ ಮಗ–ಪವಿತ್ರಾತ್ಮರ ಮೂಲಕ ಜಗತ್ತಿಗೆ ಅನುಗ್ರಹ ನೀಡುವರು.

ಕ್ರೈಸ್ತ ಧರ್ಮದಲ್ಲಿ ಕೂಡ ಧರ್ಮಬೋಧಕರು ಪವಿತ್ರಾತ್ಮನಿಂದ ಅನುಗ್ರಹಿತರಾದವರು; ಪರಮಾತ್ಮನ ಮತ್ತು ಏಸುವಿನ ಪ್ರತಿನಿಧಿಗಳು ಎಂಬ ಭಾವವಿದೆ. ಅವರಿಗೆ ಉಪಚರಿಸಿದರೆ, ಸಹಾಯ ಮಾಡಿದರೆ ದೇವರಿಗೆ ಸಹಾಯ ಮಾಡಿದಂತೆ ಆಗುತ್ತದೆ ಎಂಬ ಹೇಳಿಕೆ ಇದೆ.

"ನಿಮ್ಮನ್ನು ಸ್ವಾಗತಿಸುವವರು ನನ್ನನ್ನೇ ಸ್ವಾಗತಿಸುವವರಾಗಿದ್ದಾರೆ. ನಿಮ್ಮನ್ನು ತಿರಸ್ಕರಿಸುವವರು ನನ್ನನ್ನೇ ತಿರಸ್ಕರಿಸುವವರಾಗಿದ್ದಾರೆ. ನನ್ನನ್ನು ತಿರಸ್ಕರಿಸುವವರು ನನ್ನನ್ನು ಕಳಿಸಿಕೊಟ್ಟಾತನನ್ನೇ ತಿರಸ್ಕರಿಸುವವರಾಗಿದ್ದಾರೆ (ಲೂಕ 10 : 16)"

ಕೂಡಲ ಸಂಗಮದೇವ ಉಂಬ–ಉಡುವ ಜಂಗಮ ಮುಖದಲ್ಲಿ ಮಾನವರ ಸೇವೆಯೇ ಮಹಾದೇವನ ಸೇವೆ, ಜನತಾ ಜಂಗಮದ ಸೇವೆಯೇ ಜಗದೀಶನ ಸೇವೆ ಎಂಬ ತತ್ತ್ವವು ಏಸುವಿನ ಬೋಧನೆಯಲ್ಲಿ ತುಂಬಾ ಸ್ಪಷ್ಟವಾಗಿ ಅಭಿವ್ಯಕ್ತವಾಗಿದೆ. [ಮತ್ತಾಯ. 25 : 34-45] "ನಾನು ಹಸಿದಿದ್ದೆನು, ನೀವು ಊಟ ಕೊಟ್ಟಿರಿ; ನಾನು ಬಾಯಾರಿದ್ದೆನು, ನೀವು ನನಗೆ ನೀರನ್ನು ಕೊಟ್ಟಿರಿ; ನಾನು ಪರದೇಶಿಯಾಗಿದ್ದೆನು, ನೀವು ನನ್ನನ್ನು ನಿಮ್ಮ ಮನೆಗಳಿಗೆ ಆಹ್ವಾನಿಸಿದಿರಿ...." ಎಂದು ತೀರ್ಪಿನ ದಿನ ಏಸುವು ಹೇಳುವನು. ಈ ಕಾರ್ಯಗಳನ್ನು ಮಾಡಿದವರು ಯಾವಾಗ ಎಂದು ವಿಸ್ಮಿತರಾಗಿ ಕೇಳುವರು. ಆಗ ಏಸುವು ಹೇಳುವನು, "ನಿಶ್ಚಯವಾಗಿ ನಿಮಗೆ ಹೇಳುತ್ತೇನೆ. ನೀವು ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಉಪಕಾರ ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು." ಎಂದನು. ಅದೇ ರೀತಿ ಯಾರು ಉಪಕಾರ ಮಾಡಿಲ್ಲವೋ ಅವರು ನನಗೂ ಉಪಕಾರ ಮಾಡಿಲ್ಲದಂತಾಯಿತು ಎಂದು ಹೇಳುವನು. ಇಲ್ಲಿ ಮಾನವೀಯತೆಯೇ ಧರ್ಮದ ಸಾರ, ದಯವೇ ಧರ್ಮದ ಮೂಲ ಎಂಬುದು ಅಭಿವ್ಯಕ್ತವಾಗಿದೆ.

ಸೇಂಟ್ ಪಾಲ್ ಮತ್ತು ಶರಣ. ಮಧುವರಸ.

ಸಾಲ್ ಎಂಬುವವನು ಒಬ್ಬ ಮತಾಂಧ ಯಹೂದಿ. ಏಸುಕ್ರಿಸ್ತನ ಮರಣಾನಂತರ ಆತನ ಶಿಷ್ಯರು ಧರ್ಮಪ್ರಚಾರ ಮಾಡಿ, ಕ್ರೈಸ್ತ ವಿಶ್ವಾಸಿಗಳ ಸಂಖ್ಯೆಯನ್ನು ಬೆಳೆಸುತ್ತಿರುತ್ತಾರೆ. ಇದನ್ನು ಸಹಿಸಿಕೊಳ್ಳದ ಯಹೂದಿಗಳು ಕಿಡಿಕಿಡಿ ಕಾರುತ್ತಿರುತ್ತಾರೆ. ಮತಾಂಧನಾದ ಸಾಲ್ ಎಂಬುವವನು ದಮಾಸ್ಕ ಎಂಬಲ್ಲಿ ಕ್ರೈಸ್ತಮತಕ್ಕೆ ಅನೇಕರು ಪರಿವರ್ತನೆ ಹೊಂದುತ್ತಿದ್ದಾರೆ ಎಂಬುದನ್ನು ತಿಳಿದು ಅಂಥವರನ್ನು ಸರಪಳಿ ಹಾಕಿ ಕಟ್ಟಿ ಎಳೆದು ತರಲು ಆಜ್ಞಾಪತ್ರವನ್ನು ಯಹೂದಿ ಧರ್ಮಾಧಿಕಾರಿಗಳಿಂದ ಪಡೆದು ದಮಾಸ್ಕಕ್ಕೆ ಪಯಣಿಸುತ್ತಿರುತ್ತಾನೆ. ಅತ್ಯಂತ ಕ್ರೂರವಾಗಿ ಮತಾಂತರ

ಗೊಂಡವರನ್ನು ಹಿಂಸಿಸುತ್ತಾನೆ, ಕೊಲ್ಲುತ್ತಿರುತ್ತಾನೆ.

ಹೀಗಿರುವಾಗ ಒಂದು ದಿನ, ದಮಸ್ಕದ ಸಮೀಪದಲ್ಲಿರುವಾಗ ಆಕಾಶದಲ್ಲಿ ಒಂದು ಅದ್ಭುತವಾದ ಬೆಳಕು ಪ್ರಜ್ವಲಿಸಿತು. "ಪಾಲ್, ನನ್ನನ್ನು ಏಕೆ ಹಿಂಸಿಸುತ್ತಿರುವೆ" ಎಂಬ ಧ್ವನಿ ಕೇಳಿತು. ಅವನಿಗೆ ಆಶ್ಚರ್ಯವಾಗಿ, ನೆಲಕ್ಕೆ ಬಿದ್ದು, 'ನೀನು ಯಾರು ?' ಎಂದು ಕೇಳಿದ. "ನೀನು ಹಿಂಸಿಸುತ್ತಿರುವ ಏಸುವೇ ನಾನು" ಎಂದಿತು ಆ ಧ್ವನಿ. ನೆಲಕ್ಕೆ ಬಿದ್ದವನು ಮೇಲೇಳ ಹೋದರೆ ಅವನಿಗೆ ಕಣ್ಣೇ ಕಾಣದಂತಾಗಿತ್ತು. ಸಂಗಡ ಇದ್ದವರು ಕೈಹಿಡಿದು ಕರೆದೊಯ್ಯುವರು.

ಆ ದಮಸ್ಕದಲ್ಲಿ ಕ್ರೈಸ್ತ ಧರ್ಮ ಸ್ವೀಕರಿಸಿದ ಅನನೀಯ ಎಂಬ ಸಾತ್ವಿಕನಿದ್ದ; ಅವನಿಗೊಂದು ದರ್ಶನವಾಗಿ ಪಾಲ್‌ನು ಇಂಥಲ್ಲಿ ಇರುವನು. ಅವನ ಬಳಿ ಹೋಗಿ ಕಣ್ಣುಗಳ ಮೇಲೆ ಕೈ ಇಡು ಎಂದು ದಿವ್ಯ ಆದೇಶ ದೊರೆಯುವುದು. ಅನನೀಯನು ಹೋಗಿ ದೇವರ ಸ್ಮರಣೆ ಮಾಡಿ, ಕಣ್ಣುಗಳ ಮೇಲೆ ಕೈ ಇಡುತ್ತಲೇ ಕಳೆದುಕೊಂಡಿದ್ದ ದೃಷ್ಟಿ ಮರುಕಳಿಸಿತು. ಅವನ ಹೃದಯ ಪರಿವರ್ತನೆಯಾಯಿತು. ಕ್ರೈಸ್ತ ಧರ್ಮವನ್ನು ಹಬ್ಬಿಸಿದವರ ಸಾಲಿನಲ್ಲಿ ಸೇಂಟ್ ಪಾಲನ ಹೆಸರು ಅಗ್ರಸ್ಥಾನದಲ್ಲಿದೆ. ಏಕೆಂದರೆ ಅವನು ದೊಡ್ಡ ವಿದ್ವಾಂಸನು ವಾಗ್ಮಿಯೂ, ಶಾಸ್ತ್ರ ಕೋವಿದನೂ ಆಗಿದ್ದ. ಬೇರೆ ಎಲ್ಲ ಶಿಷ್ಯರು ಅವಿದ್ಯಾವಂತರೇ ಆಗಿದ್ದರು.

ಕಲ್ಯಾಣ ಕ್ರಾಂತಿಗೆ ನಾಂದಿ ಹಾಡಿದ ಚಮ್ಮಾವುಗೆ ಪ್ರಸಂಗದ ನಾಯಕ ಮಧುವರಸ ಇಲ್ಲಿ ನೆನಪಾಗುತ್ತಾನೆ. ಹುಟ್ಟು ಬ್ರಾಹ್ಮಣನಾದ ಮಧುವರಸ ಕಟ್ಟಾ–ಮತಾಂಧ ; ಬಸವ ತತ್ತ್ವ ದ್ವೇಷಿ. ಹರಳಯ್ಯನವರು ತಮ್ಮ ಮೈ ಚರ್ಮದಿಂದ ಮಾಡಿದ ಚಮ್ಮಾವುಗೆಯನ್ನು ದುರಹಂಕಾರಿಯಾಗಿ ಮೆಟ್ಟುವನು. ಭಯಂಕರವಾಗಿ ಉರಿ ಎದ್ದು ವಿಪರೀತ ತಾಪಕ್ಕೆ ಒಳಗಾಗುವನು. "ಯಾವ ಶರಣನನ್ನು ನೋಯಿಸಿದ್ದರಿಂದ ಈ ಬಾಧೆ ಬಂದಿದೆಯೋ ಅವನ ಅನುಗ್ರಹದಿಂದಲೇ ಇದು ವಾಸಿಯಾಗಬೇಕು. ಯಾವ ಕರಿಯ ಬಾನೆಯಲ್ಲಿ ಚಮ್ಮಾವುಗೆಗೆ ಬಳಸಿದ ಚರ್ಮವನ್ನು ಎದ್ದಲಾಗಿದೆಯೋ ಅದೇ ನೀರಿನಿಂದ ಸ್ನಾನ ಮಾಡಬೇಕು." ಎಂಬ ಪರಿಹಾರವನ್ನು ಮಂತ್ರಪುರುಷ ಬಸವಣ್ಣನವರು ಸೂಚಿಸುವರು. ಇದನ್ನೊಪ್ಪದ ಮಧುವರಸ ಆರ್ಭಟಿಸುವನು. ಆದರೆ, ಅವನ ಸಂಕಟ ನೋಡಲಾರದ ಮಗಳು ತಂದೆಗೆ ಕಾಣದಂತೆ ಶರಣ ಹರಳಯ್ಯನವರ ಮನೆಗೆ ಹೋಗಿ ನೀರು ತರುವಳು. ಗೊತ್ತಿಲ್ಲದೆ ಸ್ನಾನ ಮಾಡಿ, ಉರಿಯ ತಾಪ ಕಳೆದುಕೊಂಡ ಮಧುವರಸನ ಕಣ್ಣು ತೆರೆಯುವವು. ಅವನು ಹೃದಯ–ಪರಿವರ್ತನೆ ಹೊಂದುವನು, ಹರಳಯ್ಯನವರ, ಬಸವಣ್ಣನವರ ಮಹತ್ವವನ್ನು ಅರಿತು ಮಧುವರಸ ಲಿಂಗವಂತ ಧರ್ಮವನ್ನು ಸ್ವೀಕರಿಸುವನು.

ಅಲ್ಲಿ ಪಾಲನು ತನ್ನ ದೃಷ್ಟಿ ಕೊಟ್ಟ ಅನನೀಯನಿಂದ ದೀಕ್ಷಾಸ್ನಾನ ಪಡೆದುಕೊಂಡರೆ (ಅಪೋಸ್ತಲರ ಕೃತ್ಯಗಳು 9 : 1–18) ಇಲ್ಲಿ ಮಧುವರಸನು ಹರಳಯ್ಯನವರಿಂದ ಅನುಗ್ರಹಿತನಾಗುವನು. ಸೇಂಟ್ ಪಾಲ್‌ನ ಕೊಡುಗೆ ಬಹುದೊಡ್ಡದು. ಆ ಪ್ರಮಾಣದಲ್ಲಿ ಧರ್ಮ ಪ್ರಚಾರವನ್ನು ಮಧುವಯ್ಯ ಮಾಡದೆ ಇದ್ದರೂ ವರ್ಣಾಂತರ ವಿವಾಹಕ್ಕೆ ಧೈರ್ಯ ಮಾಡಿ, ಎಳೆಹೂಟೆ ಶಿಕ್ಷೆಗೆ (ಹರಳಯ್ಯ–ಶೀಲವಂತರ ಸಂಗಡ) ಒಳಗಾಗಿ ಹುತಾತ್ಮನಾಗಿ ಬಸವ ಧರ್ಮದ ಚರಿತ್ರೆಯಲ್ಲಿ ಅಮರಾತ್ಮನಾಗಿದ್ದಾನೆ.

ಸುವಾರ್ತಾ ಪ್ರಸಾರಕರ ಪ್ರಾಮಾಣಿಕತೆ

ಏಸುವು ಕೊಟ್ಟುದ್ದು ಸಾಸುವೆಯಷ್ಟನ್ನೇ. ಆದರೆ ಅವನ ಅನುಯಾಯಿಗಳು ಬೆಳೆಸಿದ್ದು ಬೆಟ್ಟದಷ್ಟು. ಅವರ ಪ್ರಾಮಾಣಿಕತೆ ಮೆಚ್ಚಬೇಕು. ಲುಸ್ತ್ರ ಎಂಬ ಒಂದು ಊರಿನಲ್ಲಿ ಪಾಲನು ಕುಂಟನಿಗೆ ಕಾಲು ಬರುವಂತೆ ಪವಾಡ ಮಾಡುವನು. ಕುಂಟನಿಗೆ ಕಾಲು ಬರುತ್ತಲೇ ಜನರು ಭಕ್ತಿ ಪರವಶರಾಗುವರು. ಪಾಲನು ಮಾಡಿದ ಮಹತ್ಕಾರ್ಯ ಕಂಡು ಜನರು "ಇವರು ಮಾನವರೂಪ ಧರಿಸಿರುವ ದೇವರು" ಎಂದು ಬಾರ್ನಬ ಎನ್ನುವವನನ್ನು ಜ್ಯುಪಿಟರ್ ಎಂದು ಪಾಲನನ್ನು 'ಮರ್ಕ್ಯುರಿ ದೇವತೆ' ಎಂದು ಗೌರವಿಸಲು ಹೂವಿನ ಹಾರ ತರುವರು ; ದೇವತೆಗಳಿಗೆ ಬಲಿಕೊಟ್ಟಂತೆ ಇವರಿಗೆ ಬಲಿ ಕೊಡಲು ಸಿದ್ಧರಾಗುವರು. ಆಗ ಪಾಲ್–ಬಾರ್ನಬರು ಹೇಳುವ ಮಾತು ಆ ಜನರಿಗಷ್ಟೆ ಅಲ್ಲ ಭಾರತೀಯ ಭಗವಾನರಿಗೆ ತಿವಿದು ಹೇಳುವಂತೆ ಇದೆ.

"ಎಲೈ ಜನರೇ....ನೀವು ಮಾಡುತ್ತಿರುವುದೇನು ? ನಾವೂ ನಿಮ್ಮಂತೆಯೇ ಕೇವಲ ಮನುಷ್ಯರು ! ನೀವು ಈ ವ್ಯರ್ಥವಾದ ಮೂಢತನದ ಕಾರ್ಯಗಳನ್ನು ಬಿಟ್ಟು ಭೂಮ್ಯಾಕಾಶಗಳನ್ನು, ಸಮುದ್ರವನ್ನು ಮತ್ತು ಅವುಗಳಲ್ಲಿರುವ ಸಮಸ್ತವನ್ನು ಉಂಟು ಮಾಡಿದ ಜೀವ ಸ್ವರೂಪನಾದ ದೇವರ ಕಡೆಗೆ ತಿರುಗಿಕೊಂಡು ಆತನನ್ನು ಆರಾಧಿಸಬೇಕು. ಈ ಶುಭವಾರ್ತೆಯನ್ನು ಸಾರುವುದಕ್ಕಾಗಿಯೇ ನಾವು ಇಲ್ಲಿಗೆ ಬಂದಿದ್ದೇವೆ........ನಿಮಗೆ ಮಳೆಯನ್ನು, ಸುಗ್ಗಿಕಾಲವನ್ನು, ಆಹಾರವನ್ನು ಹೃದಯದಲ್ಲಿ ಸಂತೋಷವನ್ನು ಕರುಣೆಯಿಂದಲೇ ದಯಪಾಲಿಸಿದನು. ಇವುಗಳೆಲ್ಲವೂ ಹಿಂದಿನ ಕಾಲದಿಂದಲೂ ಆತನನ್ನು ಜ್ಞಾಪಕಕ್ಕೆ ತರುವಂಥವುಗಳಾಗಿವೆ." (ಅಪೋಸ್ತಲರ ಕೃತ್ಯಗಳು 14 : 11–17)

ಇಲ್ಲಿ ನಮಗೆ ಇಳೆ ನಿಮ್ಮದಾನ, ಬೆಳೆ ನಿಮ್ಮದಾನ, ಸುತ್ತು ಇರುವ ಸಾಗರವೆಲ್ಲ ನಿಮ್ಮದಾನ; ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳ ನೇನೆಂಬೆನೈ ರಾಮನಾಥ ಎಂಬ ಜೇಡರ ದಾಸಿಮಯ್ಯನ ವಚನ ನೆನಪಿಗೆ ಬರುತ್ತದೆ.

"ಕರ್ತನನರಿಯದವನು ವಿಪ್ರನಾದಡೇನು ಚತುರ್ವೇದಿಯಾದಡೇನು ?
ಭುಕ್ತಿಕಾರಣ ಲೋಕದ ಇಚ್ಛೆಗೆ ನುಡಿದು ನಡೆವರಯ್ಯ."

ಎಂದು ಬಸವಣ್ಣನವರು ಹೇಳುವ ಮಾತಿನಲ್ಲಿ (626) ಬಹುದೊಡ್ಡ ಬೋಧೆ ಇದೆ; ಸೃಷ್ಟಿಕರ್ತನು ಯಾರು? ದೇವತೆಗಳು ಯಾರು? ಸೃಷ್ಟಿಕರ್ತನ ಸ್ವರೂಪವೇನು ? ಅವನಲ್ಲಿ ಏಕೆ ನಿಷ್ಠೆ ಇರಬೇಕು.? ಈ ವಿಚಾರಗಳು ಹಿಂದುಗಳ ತಲೆಯಲ್ಲಿ ಹೋಗುವುದೇ ಇಲ್ಲ. ಹೊಟ್ಟೆಪಾಡಿಗಾಗಿ ಏನನ್ನು ಬೇಕಾದರೂ ಪೂಜಿಸಲು ಕಲಿಸಿರುವ ಬ್ರಾಹ್ಮಣ ಧರ್ಮ ನಿಜವಾಗಿಯೂ ಸೃಷ್ಟಿಕರ್ತನಿಗೆ ದ್ರೋಹ ಮಾಡಿದೆ. ಇವರಿಗೆ ಏನೇ ಆದರೂ ದೇವರ ಪರಿಕಲ್ಪನೆ ಮೂಡುವುದೇ ಇಲ್ಲವೇನೊ ! ಉಪನಿಷತ್‌ಕಾರರು ದೇವರ ಸ್ವರೂಪ ವರ್ಣಿಸಿರಬಹುದು ನಿಜ. ಆದರೆ ಆ ಸಾತ್ವಿಕ ಕ್ಷೀಣ ಧ್ವನಿ ಈ ಮೂಢ ಹಿಂದುಗಳಿಗೆ ಕೇಳುವುದೆಲ್ಲಿ ? ಗಿಡ–ಮರ, ನೆಲ, ನೀರು, ಗಾಳಿ, ಬೆಂಕಿಗಳನ್ನೇ, ಕ್ಷುದ್ರ ದೇವತೆಗಳನ್ನೇ, ಪುರಾಣ ಪುರುಷರನ್ನೇ ದೇವರೆಂದು ನಂಬಿ ಭ್ರಾಂತರಾದವರು ಇವರು.

ಕ್ರೈಸ್ತ ಸುವಾರ್ತಾ ಪ್ರಸಾರಕರು ಸೃಷ್ಟಿಕರ್ತನಿಗೆ, ಧರ್ಮಕರ್ತ ಏಸುವಿಗೆ– ಉಭಯತರಿಗೂ ದ್ರೋಹ ಮಾಡಲಿಲ್ಲ. ತಾವೇ ದೇವರೆಂದಾಗಲೀ, ತಾವೇ ಏಸುವೆಂದಾಗಲೀ ಹೇಳದೆ ಆ ಎರಡು ಸ್ಥಾನಗಳನ್ನು ಪವಿತ್ರವಾಗಿಟ್ಟದ್ದೇ, ಅದೇ ರೀತಿ ಮುಸ್ಲೀಮರು ಅಲ್ಲಾಹ, ಮೊಹಮ್ಮದನ ಸ್ಥಾನವನ್ನು ಮೀಸಲಿಟ್ಟದ್ದೇ ಅವರ ಸಮಾಜಗಳ ಶಕ್ತಿಗೆ ಮುಖ್ಯ ಕಾರಣ. ದೇವರು ಸೃಷ್ಟಿಕರ್ತ ಎಂಬ ತಿಳುವಳಿಕೆ ಅರಿವು ಇದ್ದುದು ಮಾತ್ರವಲ್ಲದೆ, ಏಸು–ಬಸವಣ್ಣ ಇಬ್ಬರೂ ದೇವರನ್ನು ತಂದೆ ಎಂದು ಅತ್ಯಂತ ಆತ್ಮೀಯವಾಗಿ ಪ್ರೀತಿಸಿದುದು ಅತ್ಯಂತ ಪ್ರಮುಖ ಸಾಮ್ಯ. ಆ ತಂದೆ–ಮಕ್ಕಳ ಪ್ರೀತಿ ಅತ್ಯಂತ ಗಾಢವೂ, ಅನ್ಯೋನ್ಯವೂ ಆಗಿತ್ತೆಂಬುದು ಉಭಯತರ ಮಾತುಗಳಲ್ಲಿ ಪ್ರಕಟವಾಗುತ್ತದೆ. [ಈಗ ನಮಗೋ ಬಸವಣ್ಣನನ್ನು ತಂದೇ, ಅಪ್ಪಾ ಎಂದು ಕರೆಯುವುದರಲ್ಲೇ ಹೃದಯವು ತುಂಬಿ ಹೋಗಿರುತ್ತದೆ ; ಲಿಂಗಪ್ಪನ ನೆನಪನ್ನು ತುಂಬಿಕೊಳ್ಳಲು ಜಾಗವೇ ಖಾಲಿ ಇರದಂತಾಗಿ ಬಿಡುತ್ತದೆ !] ಕೇವಲ ಬೌದ್ಧಿಕ ಕರೆ (Intellectual calling) ಯಾಂತ್ರಿಕ ಸ್ತುತಿ ಅಲ್ಲಿಲ್ಲ; ಏಸುವು ಹೇಳುವಂತೆ ಪೂರ್ಣ ಹೃದಯದಿಂದ ಪ್ರೀತಿಸುವಿಕೆ ಇದೆ.

ಎನಗೆ ನಿಮ್ಮ ನೆನಹವೆ ಪ್ರಾಣ ಕಾಣಾ, ತಂದೆ.
ಸ್ವಾಮಿ, ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ.
ವದನದಲ್ಲಿ ಷಡಕ್ಷರಿಯ ಬರೆಯಯ್ಯಾ, ಕೂಡಲ ಸಂಗಮದೇವಾ.

[ಬ. ಷ. ವ. 497]

ಈ ಉಭಯತರೂ ಶರೀರವನ್ನು ತೊಟ್ಟು [ಅಂದರೆ ಮನುಷ್ಯ ಕುಮಾರರಾಗಿ] ಮರ್ತ್ಯದಲ್ಲಿ ಓಡಾಡುತ್ತಿದ್ದರೂ ಗಾಳಿಪಟಗಳಂತೆ ಇವರನ್ನು ಆಡಿಸುತ್ತಿದ್ದ ಹಸ್ತ ಆ ದೇವನದೇ ! ಪೂರ್ಣಾವತಾರಿ ಬಸವಣ್ಣ ಪುಸ್ತಕದಲ್ಲಿ ನಾನು ಬರೆದಂತೆ, ಇವರು ಶ್ರೀಗಂಧದ ವೃಕ್ಷದಂತೆ. ಅದು ಬೇರೊಂದು ವೃಕ್ಷದೊಡನೆ ಸಂಪರ್ಕ ಸಾಧಿಸಿ ಅದರ ರಸ ಕುಡಿದು ತಾನು ಬೆಳೆದು ಘಮಘಮಿಸುವಂತೆ, ದೇವರೆಂಬ ವೃಕ್ಷದಿಂದಲೇ ಕಾರುಣ್ಯ ರಸವನ್ನು ಈಂಟಿ ತಾವು ಪರಿಪೂರ್ಣರಾಗಿ ಬೆಳೆದು, ಲೋಕಕ್ಕೆ ದಿವ್ಯ ಸಂದೇಶದ ಪರಿಮಳ ನೀಡಿದರು.

ಒಂದು ಕಡೆ ಏಸುವು ಹೇಳುವ ಮಾತು ಪ್ರವಾದಿ (prophet) ಯ ವ್ಯಾಖ್ಯಾನದಂತಿದೆ. "ಸ್ವಂತ ಕಲ್ಪನೆಗಳನ್ನು ಪ್ರಕಟಿಸುವ ಯಾವನೇ ಆದರೂ ತನಗೆ ಮಾನ ಬರಬೇಕೆಂದು ಅಪೇಕ್ಷಿಸುತ್ತಾನೆ. ಆದರೆ ತನ್ನನ್ನು ಕಳುಹಿಸಿದವನಿಗೆ ಮಾನ ಬರಬೇಕೆಂದು ಅಪೇಕ್ಷಿಸುವವನು ಸತ್ಪುರುಷನು ಮತ್ತು ಸತ್ಯವಂತನು ಆಗಿದ್ದಾನೆ; (ಯೋಹಾನ 7 : 18) ಏಸು, ಮೊಹಮ್ಮದ್, ಬಸವಣ್ಣ, ಗುರುನಾನಕ ಇವರು ಸೇಶ್ವರವಾದಿ ಧರ್ಮಗಳ ಸಂಸ್ಥಾಪಕರು. ಇವರು ತಮ್ಮ ಅಪಾರ ಪ್ರತಿಭೆ, ಬುದ್ಧಿವಂತಿಕೆ, ಪವಾಡಗಳನ್ನು ಮಾಡುವ ಮಹಿಮಾಶಕ್ತಿಯನ್ನು ಪ್ರದರ್ಶಿಸಿ ಸೃಷ್ಟಿಕರ್ತನ ಘನತೆಯನ್ನು ತೋರಿಸಲು ಪ್ರಯತ್ನಿಸಿದ್ದಾರೆ. ದೇವರನ್ನು ಜನ ನಂಬಬೇಕು, ಅವನ ಅನುಗ್ರಹ ಪಡೆಯಬೇಕು. ಇದನ್ನು ಬೆಳೆಸಲು ತಾವು ಬಂದವರು ಎಂಬ ಶ್ರದ್ಧೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಆದರೆ ಡೋಂಗಿ ಭಗವಾನರುಗಳು ಕೈಚಳಕಗಳನ್ನು ಮಹಿಮಾಕಾರ್ಯವೆಂದು ಪ್ರದರ್ಶಿಸಿ, ಜನರು ತಮ್ಮನ್ನು ಆರಾಧಿಸಬೇಕೆಂದು ಇಷ್ಟಪಟ್ಟಿದ್ದಾರೆ. ಅದಕ್ಕೆ ಬಗೆಬಗೆಯ ಭಂಗಿಗಳಲ್ಲಿ ತಮ್ಮ ಚಿತ್ರಗಳನ್ನೇ ಜನರು ಆರಾಧಿಸಬೇಕೆಂದು ಇಷ್ಟಪಟ್ಟಿದ್ದಾರೆ. ಆದರೆ ನಿಜವಾದ ಅವತಾರಿಕರು ದೇವರನ್ನು ಉತ್ಕಟವಾಗಿ ಪ್ರೀತಿಸಿ ಅವನ ಮಹಿಮೆಯನ್ನು ಪ್ರಕಟಪಡಿಸಲು ಯತ್ನಿಸಿದ್ದಾರೆ.

ಈ ಲೇಖನಕ್ಕೆ ಪೂರ್ಣವಿರಾಮವಿಡುವ ಮೊದಲು ಒಂದು ಮಾತು ಹೇಳಬೇಕು; ಏಸುವು ಹೇಳುವ ಒಂದು ದೃಷ್ಟಾಂತ ಹೀಗಿದೆ.

"ಓರ್ವ ವ್ಯಕ್ತಿ ವಿದೇಶ ಯಾತ್ರೆಗೆ ಹೋಗುವ ಮುನ್ನ ತನ್ನ ಸೇವಕರನ್ನು ಕರೆದು ಒಬ್ಬೊಬ್ಬನಿಗೆ 50,000, 20,000, 10000 ಹೀಗೆ ಹಣ ಕೊಡುವನು. ಅವನು ವಾಪಸ್ಸು ಬರುವುದರಲ್ಲಿ ಒಬ್ಬನು ಅದನ್ನು ವಿಪರೀತ ಅಭಿವೃದ್ಧಿ ಪಡಿಸಿರುವನು; ಒಬ್ಬನು ಸ್ವಲ್ಪ ಅಭಿವೃದ್ಧಿ ಪಡಿಸಿರುವನು; ಇನ್ನೊಬ್ಬ ಎಷ್ಟಿತ್ತೋ ಅಷ್ಟನ್ನೇ ಕಾಯ್ದಿರುವನು. ಬಂದ ನಂತರ ಹಣದ ಮಾಲಿಕ ಏನೂ ಅಭಿವೃದ್ಧಿ ಪಡಿಸದವನಿಂದ

ಕಿತ್ತುಕೊಂಡು; ಅವನಿಗೆ ಶಿಕ್ಷೆ ನೀಡಿ, ಆ ಹಣವನ್ನು ಚೆನ್ನಾಗಿ ವೃದ್ಧಿಸಿದವನಿಗೆ ಕೊಡುವನು," ಮತ್ತಾಯ 25 : 14–30; ಕ್ರೈಸ್ತ ಸುವಾರ್ತಾ ಪ್ರಸಾರಕರು ಮತ್ತು ಧರ್ಮಗುರುಗಳು ಮೊದಲನೆ ವರ್ಗದಲ್ಲಿ ಬರುತ್ತಾರೆ; ಏಸುವು ತನ್ನ ಜೀವಿತಾವಧಿಯಲ್ಲಿ ಹಾಕಿಕೊಟ್ಟ ಪಾಠಕ್ಕಿಂತಲೂ ಹೆಚ್ಚು ಬೆಳೆಸಿಕೊಂಡಿದ್ದಾರೆ. ಅನುಯಾಯಿ-ಗಳನ್ನು ಕೋಟಿ ಕೋಟಿ ಸಂಖ್ಯೆಯಲ್ಲಿ ಬೆಳೆಸಿದ್ದಾರೆ. ಅದೇ ಲಿಂಗವಂತ ಮಠಾಧಿಕಾರಿಗಳು ಬೆಳೆಸುವುದತ್ತಲಿರಲಿ ಧರ್ಮಗುರು ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ಮೂಢನಂಬಿಕೆಯ ಮುಳ್ಳು ಕಲ್ಲು ಹರವಿದ್ದಾರೆ; ಜಾತೀಯತೆಯ ಹಳ್ಳ ತೋಡಿದ್ದಾರೆ. ಇದಕ್ಕಾಗಿ ಕ್ರೈಸ್ತ ಧರ್ಮ ಪ್ರಸಾರಕರು ಅಭಿನಂದನಾರ್ಹರು. ಧರ್ಮಗುರು ಬಸವಣ್ಣ ಹಾಕಿಕೊಟ್ಟಷ್ಟು ಶುದ್ಧತೆ, ಸಾಂದ್ರತೆ ಉಳಿಸದ ಲಿಂಗವಂತ ಮಠಾಧೀಶರು ಖಂಡನಾರ್ಹರು;

★

ಧರ್ಮಪಿತ ಬಸವಣ್ಣನವರು ಕಲ್ಯಾಣದಿಂದ ಹೊರಟುದು ಹೇಗೆ ?

—ಮಾತಾಜಿ

ಬೌದ್ಧ ಧರ್ಮ ಪುರಾತನ ; ಆದರೂ ಅದರ ಅನುಯಾಯಿಗಳು ಇತಿಹಾಸವನ್ನು ಗುರುತಿಸಿಕೊಂಡರು ; ಬುದ್ಧನ ಜೀವನದ ಚಾರಿತ್ರಿಕ ಘಟನೆಗಳನ್ನು ದಾಖಲಿಸಿದರು. ಕ್ರೈಸ್ತ ಧರ್ಮ ಸಹ ಪುರಾತನ; ಅವರು ಸಹ ಏಸುವಿನ ಹುಟ್ಟು–ಯೌವ್ವನ–ದೀಕ್ಷಾ ಸ್ನಾನ–ಬೋಧನೆ ಸಂಚರಿಸಿದ ಸ್ಥಳಗಳ ಮಾಹಿತಿಯನ್ನು ಕರಾರುವಾಕ್ಕಾಗಿ ಹೇಳಿಕೊಂಡು ಬಂದರು. ಮೂಲ ಸುವಾರ್ತಾ ಪ್ರಸಾರಕರು ಬರೆದುದನ್ನು ಬದಲು ಮಾಡದೆ ಅದನ್ನೇ ಜನಮನದಲ್ಲಿ ಬಿತ್ತಿದರು.

ಲಿಂಗಾಯತ ಧರ್ಮವು ಹುಟ್ಟಿದ್ದು ಹನ್ನೆರಡನೆಯ ಶತಮಾನದಲ್ಲಿ, ಅಲ್ಲಿಗಾಗಲೇ ಭಾಷೆ ಬೆಳವಣಿಗೆಯಾಗಿತ್ತು. ಸುಂದರ ಕನ್ನಡ ಲಿಪಿಯೂ ಮೈದಳೆದಿತ್ತು; ಮೊದಲು ಸ್ಮೃತಿಯಾಗಿ, ಶ್ರುತಿಯಾಗಿ ಸಾಗಿಬರುತ್ತಿದ್ದ ಸಾಹಿತ್ಯ ಈಗ ಬರವಣಿಗೆಯಾಗಿಯೇ ಸಾಗಬಹುದಿತ್ತು. ಇಷ್ಟೆಲ್ಲ ಇದ್ದೂ ಸಹ ಲಿಂಗಾಯತ ಧರ್ಮದ ಉಗಮ – ಪ್ರಗತಿ ಸರಿಯಾಗಿ ದಾಖಲಿಸಲ್ಪಡಲಿಲ್ಲ. ಪುರೋಹಿತ ಶಾಹಿ ಜನ ಹದ್ದುಗಳಂತೆ ಎರಗಿ ಮತ್ತಷ್ಟು ಈ ಧರ್ಮ–ಸಾಹಿತ್ಯ–ಇತಿಹಾಸವನ್ನು ವಿಕೃತಗೊಳಿಸಿದರು; ವಿಶ್ವಗುರು ಬಸವಣ್ಣನವರನ್ನು ದಿವ್ಯ ಭವ್ಯ ಪುರುಷರನ್ನಾಗಿ ಚಿತ್ರಿಸಿದ ಕವಿಗಳು

ಸಹಿತ ವರ್ಣಾಂತರ ವಿವಾಹದಂತಹ ಘಟನೆಯನ್ನು ಮರೆಮಾಚಿದರು, ಬಸವಣ್ಣನವರನ್ನು ಮತಾಂಧರಂತೆ ಚಿತ್ರಿಸಿದರು, ವರ್ಣಾಂತರ ವಿವಾಹವು ನಡೆದು ಶರಣರು ಸಂಕಷ್ಟಕ್ಕೆ ಸಿಕ್ಕಾಗ ಶಾಂತಿಯನ್ನರಸುವ ನೆಪದಲ್ಲಿ ತಪಸ್ಸಿಗೆ ಹೊರಟಂತೆ (ಮೇನಕೆಯೊಡನೆ ವ್ಯವಹರಿಸಿ ಮಗುವು ಹುಟ್ಟಿದಾಗ ಕೈ ಚೆಲ್ಲಿ ಹೊರಟ ವಿಶ್ವಾಮಿತ್ರನಂತೆ) ಪಲಾಯನವಾದಿಯನ್ನಾಗಿ ಮತ್ತೆ ಕೆಲವರು ಚಿತ್ರಿಸುವರು. ಇವೆಲ್ಲ ವಿಕೃತ ಚಿತ್ರಣಗಳೇ !

ಬಸವಣ್ಣನವರು ಸ್ವಭಾವತಃ ಪಲಾಯನವಾದಿಯಲ್ಲ. ಅಪಾರ ದಿಟ್ಟರು; ಪಲಾಯನವಾದಿ ಎಂದರೆ ಯಾರು ? ಮುಂದಾಲೋಚನೆ ಇಲ್ಲದೆ ಮಾತನಾಡಿ ಅಥವಾ ದುಡುಕಿ ನಡೆದು, ಪರಿಣಾಮವು ವಿಪರೀತವಾದಾಗ ಅದನ್ನು ಎದುರಿಸಲಾರದೆ ತಪ್ಪಿಸಿಕೊಂಡು ಹೋಗುವವನು. ಪಲಾಯನವಾದ ಅಪ್ರಬುದ್ಧತೆಯ ಲಕ್ಷಣ. ಬಸವಣ್ಣನವರು ಪ್ರತಿ ಹೆಜ್ಜೆಯನ್ನೂ ಆಲೋಚಿಸಿಯೇ ಇಟ್ಟರು; ಸನಾತನಿಗಳಿಂದ ತೀವ್ರವಾದ ಪ್ರತಿಕ್ರಿಯೆ ಎದುರಿಸಬಹುದೆಂಬ ಅರಿವು ಅವರಿಗೆ ಇದ್ದೇ ಇತ್ತು; ಬಿಜ್ಜಳನು ಒಳ್ಳೆಯವನಿದ್ದು, ಅವನ ಹೃದಯವು ಒಳ್ಳೆಯದಿದ್ದರೂ ಕಿವಿಯು ಹಿತ್ತಾಳೆ ಮತ್ತು ಬುದ್ಧಿ ಸಹ ಪ್ರಗತಿಪರ ಚಿಂತನೆಯುಳ್ಳುದಲ್ಲ ಎಂಬುದು ಗೊತ್ತಿತ್ತು. ಬಸವಣ್ಣನವರು ಕೈಗೊಂಡ ಒಂದೊಂದು ಸುಧಾರಣೆಯು ನೇರವಾಗಿ ವೈದಿಕ ಧರ್ಮಕ್ಕೆ (ಬೇರೆಲ್ಲ ಸಂತರಿಗಿಂತಲೂ) ನೇರ ಪೆಟ್ಟು ಕೊಡುತ್ತಿತ್ತು. ನಿಜವಾಗಿಯೂ ಇಷ್ಟಾದರೂ ಪ್ರಗತಿ ಸಾಧಿಸಲು ವೈದಿಕರು ಬಿಟ್ಟುದೇ ದೊಡ್ಡದು. ಶ್ರೀ ದಯಾನಂದ ಸರಸ್ವತಿ ಹುಟ್ಟು ಬ್ರಾಹ್ಮಣರಿದ್ದು, ವೇದ ಸಂಸ್ಕೃತಿಯ ಪುನರುದ್ಧಾರಕರಿದ್ದರೂ ಸನಾತನಿಗಳು ಅವರನ್ನು ಕೊಂದೇ ಬಿಟ್ಟರು, ವಿಷಪ್ರಾಶನಮಾಡಿ. ಉಳಿದೆಲ್ಲ ವಿಷಯದಲ್ಲಿ ಅವರೊಡನೆ ಸಹಮತವಿದ್ದರೂ ಬಹುದೇವತೋಪಾಸನೆಯನ್ನೇ ಬಂಡವಾಳವಾಗಿ ಮಾಡಿಕೊಂಡು ಬದುಕಿರುವ ಪುರೋಹಿತಶಾಹಿ ಜನರಿಗೆ ಶ್ರೀ ದಯಾನಂದ ಸರಸ್ವತಿಯವರ ಏಕ-ದೇವೋಪಾಸನೆ ಅಸಹನೀಯ ಸಂಕಟ ಕೊಟ್ಟಿತು. ವಿಶ್ವಗುರು ಬಸವಣ್ಣನವರನ್ನು ಹಾಗೆಯೇ ಬಿಟ್ಟುದು ನಿಜಕ್ಕೂ ಸೋಜಿಗ; ನಾನು ಅಂದುಕೊಳ್ಳುತ್ತೇನೆ, ಬ್ರಹ್ಮಹತ್ಯಾ ದೋಷ (ಬಸವಣ್ಣನವರು ಹುಟ್ಟು ಬ್ರಾಹ್ಮಣರಾದ ಕಾರಣ) ಪ್ರಾಪ್ತಿಯಾಗುತ್ತದೆ ಎಂದು ಸುಮ್ಮನೇ ಸಹಿಸಿಕೊಂಡರೇನೋ ಎಂದು !

* ಜೋಳವಾಳಿಯಾನಲ್ಲ, ವೇಳೆವಾಳಿಯಾನಯ್ಯ
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ
ಕೇಳು ಕೂಡಲ ಸಂಗಮದೇವಾ,
ಮರಣವೇ ಮಹಾನವಮಿ.

* ಹೆಣನ ಮೇಲೆ ಕಂಚಿಟ್ಟುಂಡರೆಯೂ
ಶರಣೆಂಬುದ ಮಾಣೆ.

ಇಂಥ ನೂರಾರು ಹೇಳಿಕೆಗಳು ಬರುತ್ತವೆ. ಅಂತರಂಗವು ಆ ರೀತಿ ಆಲೋಚಿಸದ ಹೊರತು ಇಂಥ ವೀರೋಚಿತ ಮಾತುಗಳು ಬರಲು ಸಾಧ್ಯವಿಲ್ಲ. ಇಂಥ ವಿಚಾರಶೀಲರು ಶರಣರ ಮಧ್ಯೆ ವಿವಾಹ ಮಾಡಿಸಿ, ಅವರನ್ನು ಸಂಕಷ್ಟದಲ್ಲಿ ಬಿಟ್ಟು ಹೋಗಲು ಸಾಧ್ಯವೆ ?

ವರ್ಣಾಂತರ ವಿವಾಹ ಸನಾತನಿಗಳಲ್ಲಿ ಅಸಹನೀಯ ಕಿಚ್ಚು ಹುಟ್ಟಿಸಿತು. ಬಸವಣ್ಣನವರನ್ನು ರಾಜಸಭೆಯಲ್ಲಿ ಪ್ರಶ್ನಿಸಿದರು. ಅವರು ಸಮರ್ಪಕವಾಗಿ ಉತ್ತರಿಸಿ, ರಾಜನ ಸಂದೇಹ ಪರಿಹರಿಸಿದರು. ರಾಜನು ಬಸವಣ್ಣನವರ ವಿಚಾರ ಧಾರೆಯಿಂದ ಸಮಾಧಾನಗೊಳ್ಳುತ್ತಿದ್ದುದನ್ನು ಮತ್ತು ಪ್ರಭಾವಿತನಾಗುತ್ತಿದ್ದುದನ್ನು ಕಂಡು ಅವರು ಚಿಂತಾಕ್ರಾಂತರಾಗಿ ಭಂಡಾರ–ಅಧಿಕಾರ ದುರುಪಯೋಗಗಳ ಆರೋಪ ಕೊಟ್ಟರು. ಆ ಸಂದೇಹವನ್ನೂ ಪರಿಹರಿಸಿದರಾದರೂ ಅವರಿಗೆ ಈ ರಾಜಕೀಯದ ಕೊಳಕು ಬೇಡವಾಯಿತು. ಯಾವಾಗಲೂ ದುರ್ಜನರು, ಸ್ವಾರ್ಥಿಗಳು ಅಧಿಕಾರಕ್ಕಾಗಿ ತೀವ್ರವಾಗಿ ಪೈಪೋಟಿ ಮಾಡುತ್ತಾರೆ. ಸಾತ್ವಿಕರು, ಸತ್ಯವಂತರು ತಮ್ಮಿಂದ ಏನಾದರೂ ಉಪಕಾರವಾಗುವುದು ಎಂದು ಅಧಿಕಾರದಲ್ಲಿರುತ್ತಾರೆ. ಅವರಿಗೆ ಕೆಳಮಟ್ಟದ ವರ್ತನೆ ಹಿಡಿಸದಿದ್ದರೂ, ತಾವು ಅಧಿಕಾರ ಬಿಟ್ಟರೆ ದುರ್ಜನರ ಕೈ ಮೇಲಾಗಿ ಮುಗ್ಧರಿಗೆ ಕಿರುಕುಳವಾಗುತ್ತದೆ ಎಂದು ಸಹಿಸಿಕೊಳ್ಳುತ್ತಾರೆ. ಈಗ ಬಸವಣ್ಣನವರಿಗೆ ಅನಿಸಿತು, "ಸಾಕು ಈ ಜಂಜಡ. ಇನ್ನು ಪೂರ್ಣ ಸಮಯವನ್ನು ಧರ್ಮಕ್ಕಾಗಿ ಮೀಸಲಿಟ್ಟು, ಶರಣರ ಮಧ್ಯೆ ಆನಂದದಲ್ಲಿ ಇರೋಣ" ಎಂದು. ಅಧಿಕಾರ ತ್ಯಾಗವನ್ನು ಮಾಡಿಯೇ ಬಿಟ್ಟರು. ಜಾತಿವಾದಿಗಳಿಗೆ ಇಷ್ಟಕ್ಕೆ ಸಮಾಧಾನವಿಲ್ಲ ; ಅಧಿಕಾರವು ತಮ್ಮ ಕೈಗೆ ಸಿಕ್ಕುವುದೆಂಬ ಕನಸು ನನಸಾದರೂ ವರ್ಣಾಂತರ ವಿವಾಹದಲ್ಲಿ ಭಾಗಿಗಳಾದವರಿಗೆ ಕ್ರೂರ ಶಿಕ್ಷೆ ಆಗಬೇಕು ; ಮುಂದೆ ಯಾರೂ ಇಂಥ ವಿವಾಹಕ್ಕೆ ಕೈ ಹಾಕಬಾರದೆಂದು ಸಮಾಜಕ್ಕೆ ಎಚ್ಚರಿಕೆ ಕೊಡುವುದೇ ಆಗಿತ್ತು. ಬಸವಣ್ಣನವರು ಕಲ್ಯಾಣದೊಳಗೆ ಇದ್ದರೆ ಈ ಕ್ರೂರಕ್ರಮ ಸಾಧ್ಯವಾಗದು ; ಇವರು ಪ್ರಚೋದಿಸಿದಾಗ ದಿಗ್ಭ್ರಾಂತನಾಗುವ ಬಿಜ್ಜಳನು, ಬಸವಣ್ಣನವರನ್ನು ಕಾಣುತ್ತಲೇ, ಅವರ ವಿವರಣೆ ಕೇಳುತ್ತಲೇ ಮೆತ್ತಗಾಗಿ ಬಿಡುತ್ತಿದ್ದ. 'ಗರುಡನನ್ನು ಕಂಡ ಸರ್ಪ ಧರೆಗೆ ಅಂಟಿಕೊಳ್ಳುವಂತೆ.' ಇದಕ್ಕಾಗಿ ಬಸವಣ್ಣನವರನ್ನು ಕಲ್ಯಾಣದಿಂದ ಹೊರಹಾಕುವ ತಂತ್ರ ರೂಪಿಸಿದರು. ರಾಜನನ್ನು ಪ್ರಚೋದಿಸಿ ಅವನು ಮತಿಭ್ರಾಂತನಂತೆ ಆದಾಗ ಗಡಿಪಾರು ಶಿಕ್ಷೆ ಹೊರಡಿಸಿದರು.

ಇಲ್ಲಿಗಾಗಲೇ ಬಸವ ಧರ್ಮೀಯರ ಸಂಖ್ಯೆ ಗಣನೀಯವಾಗಿ ಏರಿತ್ತು. ಕಲ್ಯಾಣಪಟ್ಟಣದಲ್ಲಿ ಬಹು ಸಂಖ್ಯಾತರೂ ಆಗಿದ್ದರು. ಆದಕ್ಕಾಗಿಯೇ ಮಡಿವಾಳ ಮಾಚಿದೇವರಂಥ ತೀವ್ರವಾದಿಗಳು ಗಡಿಪಾರು ಶಿಕ್ಷೆಯನ್ನು ಒಪ್ಪಿಕೊಳ್ಳಬಾರದು ಎಂದರು. ಹೋರಾಡೋಣ ಎಂದರು. ಬಸವಣ್ಣನವರು ಹೋರಾಟ ಬೇಡವೆಂದು, ಗಡಿಪಾರನ್ನು ಒಪ್ಪಿಕೊಂಡು ಹೊರಡಲು ಸಿದ್ಧರಾದರು. ಈ ರೀತಿ ಗಡಿಪಾರು ಒಪ್ಪಿಕೊಂಡು ಹೊರಟುದು ಪಲಾಯನವಾದವೆ ? ಸೂಕ್ತ ನಿರ್ಧಾರವೆ ? ನನ್ನ ದೃಷ್ಟಿಯಲ್ಲಿ ಸೂಕ್ತ ನಿರ್ಧಾರ. ನನ್ನ ಚಿಂತನೆಯ ಶೈಲಿ ಹೀಗಿದೆ.

ನಿಮಗೆಲ್ಲ ಗೊತ್ತಿರುವಂತೆ ಜನವರಿ 10 ರಂದು ನಮ್ಮೆಲ್ಲರ ಪ್ರಾಣ, ಆರಾಧ್ಯ ಗುರು ಬಸವಣ್ಣನವರ ಭಾವಚಿತ್ರ ಕಟ್ಟಿದ ಕಮಾನನ್ನು ಪಂಚಾಚಾರ್ಯ ಸ್ವಾಮಿಗಳು ದುರ್ಯೋಧನನಂತೆ ಎದುರು ನಿಂತು, ಶಾಸಕ ಕಾಶಪ್ಪ ಎಂಬ ದುಶ್ಯಾಸನನ ಮೂಲಕ ಕೆಡವಿಸಿದರು. ಆಗ ಮತಾಂಧ ಜಾತಿವಾದಿಗಳ ಸಂಖ್ಯೆ ಕಮ್ಮಿ ಇತ್ತು. ಏನೂ ತಿಳಿಯದೆ 'ಕಾಶಪ್ಪನವರು ಲಾರಿ ಕಳಿಸಿದ್ದರು' ಎಂದು ಹತ್ತಿ ಬಂದ ಮುಗ್ಧರಿದ್ದರು ; ಕಟ್ಟಾ ಬಸವ ತತ್ತ್ವದವರು ಇದ್ದರು. ಇಬ್ಬರು, ಕಲ್ಯಾಣದ ಶರಣಯ್ಯ ಮತ್ತು ಶರಣ ಬಸವಾನಂದ ಸ್ವಾಮಿಗಳು ಮಾಚಿದೇವರ ಅವತಾರವೇ ಆಗಿದ್ದರು. ನಾನು ಇದಕ್ಕೆ ಅವಕಾಶ ಕೊಡಲಿಲ್ಲ, "ಈಗ ಶಾಂತಿ ಅಗತ್ಯ. ನಾವು ಬಸವ ದ್ವೇಷಿಗಳಲ್ಲ ಎಂದು ಅವರು ಪತ್ರಿಕಾ ಹೇಳಿಕೆ ಕೊಟ್ಟು 4 ದಿನವಾಗಿದೆ. ಈಗದರ ಪರೀಕ್ಷೆ ನಡೆಯುತ್ತಿದೆ. ಬಸವಣ್ಣನವರ ಮನಸ್ಸಿಗೆ ನೋವಾದರೆ ನಂತರ ಪ್ರಾಯಶ್ಚಿತ್ತ ಮಾಡಿಕೊಳ್ಳೋಣ. ಈಗ ಹಿಂಸೆಗೆ ಅವಕಾಶ ಕೊಡಬೇಡಿರಿ. ನಾನು ಪೋಲೀಸ ಅಧಿಕಾರಿಗಳಿಗೆ ಮೊದಲೇ ಮಾತು ಕೊಟ್ಟಿದ್ದೇನೆ" ಎಂದೆ. ಇದು ಹೇಡಿತನದ ನಿರ್ಧಾರವೆ ? ವಿನಾ ಕಾರಣ ಹೊಡೆದಾಟಕ್ಕೆ ಅವಕಾಶಕೊಡುವಂತೆ ಪ್ರಚೋದಿಸಿದ್ದರೆ ದಿಟ್ಟತನವಾಗುತ್ತಿತ್ತೆ ? ಆ ಘಟನೆಯಿಂದ ಪಂಚಾಚಾರ್ಯರ ಕಪಟತನ ತನ್ನಿಂದ ತಾನೇ ಬಯಲಾಯಿತು ? ಬಸವಣ್ಣನವರ ಕೀರ್ತಿ ಮಸುಳಿಸಲಿಲ್ಲ. ವಿನಾಶ ಕಾಲೇ ವಿಪರೀತ ಬುದ್ಧಿ ಎಂಬಂತೆ ಅವರು ತಾವೇ ದೇವರ ಅವಕೃಪೆಯನ್ನು, ಪಾಪವನ್ನು ಕಟ್ಟಿಕೊಂಡರು.

ಸಾಮಾನ್ಯವಾಗಿ ನಾಯಕನು ದೂರವಾಗುತ್ತಿದ್ದಂತೆಯೇ ಶತ್ರುಗಳ ಸಿಟ್ಟು ಅಡಗುವುದು. ಬಸವಣ್ಣನವರು ಗಡಿಪಾರನ್ನು ಒಪ್ಪಿಕೊಂಡು ಹೋದರೆ ಮುಂದೆ ನಿರಪರಾಧಿ ಶರಣರಿಗೆ ಏನೂ ತೊಂದರೆಯಾಗಲಿಕ್ಕಿಲ್ಲ ಎಂದುಕೊಂಡರು. ಅಲ್ಲದೆ ಸಾಹಿತ್ಯ ಸಂರಕ್ಷಣೆ ಎಲ್ಲಕ್ಕೂ ಮಿಗಿಲಾದ ಹೊಣೆ. ತಕ್ಷಣವೇ ಕಲ್ಯಾಣದಲ್ಲಿ ಬೀದಿ ಕಾಳಗ ಶುರುವಾಗಿದ್ದರೆ ವಚನ ಸಾಹಿತ್ಯ ಇಷ್ಟೂ ಉಳಿಯುತ್ತಿರಲಿಲ್ಲ. ವಚನ ಸಾಹಿತ್ಯವನ್ನು ಕಟ್ಟಿಕೊಂಡು, ಹೊರಗೆ ಸಾಗಿಸಲು 3–4 ದಿವಸಗಳ ಅವಧಿ ಸಿಕ್ಕಿತು.

ಆ ಬಗ್ಗೆ ಶರಣರಿಗೆ ಸ್ಪಷ್ಟ ಸಂದೇಶ ನೀಡಿಯೇ ಹೊರಟರು. ಈ ಸಾವಧಾನದ ನಿರ್ಣಯ ತೆಗೆದುಕೊಳ್ಳದೆ ಇದ್ದರೆ ವಿಪ್ಲವವಾಗಿ ವಿಪರೀತ ಅನಾಹುತ, ರಕ್ತಪಾತವಾಗುತ್ತಿತ್ತು. ಆದರಿಂದ ಏನನ್ನು ಸಾಧಿಸಬಹುದಿತ್ತು ? ಧರ್ಮಕರ್ತ ಬಸವಣ್ಣನವರು ಶರಣರನ್ನು ಹೋರಾಟಕ್ಕಿಳಿಸಿ, ಗೆದ್ದು, ಸಿಂಹಾಸನ ಏರಬೇಕಾಗಿದ್ದಿತೆ ? ಅವರು ಬಹಳ ದೂರಾಲೋಚನೆ ಮಾಡಿ, ಗಡಿಪಾರು ಸ್ವೀಕರಿಸಿದರು. ಅವರು ಒಲ್ಲದ ಮನಸ್ಸಿನಿಂದ ಹೊರಟಿದ್ದಾರೆ ಎಂಬುದಕ್ಕೆ ಈ ವಚನಗಳು ಸಾಕ್ಷಿ ನುಡಿಯುತ್ತವೆ.

೧. ಅಯ್ಯಾ ನಿಮ್ಮ ಮಹಾವ್ರತಿಗಳನಗಲಿ ಬದುಕಲಾರೆನು
ಶಿವಧೋ ಶಿವಧೋ ಕಂಗಳಶ್ರುಗಳಲ್ಲಿ ಮುಂದುಗಾಣೆನು
ಲಿಂಗ ಸಂಗಿಗಳನಗಲಿ ನಾನೆಂತು ಬದುಕುವೆ
ಕೂಡಲ ಸಂಗಮದೇವಾ ? [೩೬೮]

೨. ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ನೋಡಯ್ಯಾ !
ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ನೋಡಯ್ಯಾ !
ನಾನೊಬ್ಬನೇ ಉಳಿದೆನು, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು
ಕೂಡಲ ಸಂಗಮದೇವಾ, **ನಿಮ್ಮ ಶರಣರನಗಲಿದ ಕಾರಣ.** [೩೬೯]

೩. ಕಂಡಡೆ ಮನೋಹರವಯ್ಯಾ, ಕಾಣದಿದ್ದಡೆ ಅವಸ್ಥೆ ನೋಡಯ್ಯಾ !
ಹಗಲು ಇರುಳಹುದು, ಇರುಳು ಹಗಲಹುದು !
ಎಂತಯ್ಯಾ ಆಳವಾಡಿ ಕಳೆವೆನು ?
ಒಂದು ಜುಗ ಮೇಲೆ ಕೆಡೆದಂತೆ !
ಕೂಡಲ ಸಂಗನ ಶರಣರನಗಲುವ ಧಾವತಿಯಿಂದ
ಮರಣವೇ ಲೇಸು ಕಂಡಯ್ಯಾ. (೩೭೦)

1. ಧರ್ಮಪಿತರಿಗೆ ತಮ್ಮ ಬಂಧುಗಳನ್ನಗಲಲು ದುಃಖವಾಗಿಲ್ಲ, ಶರಣರನ್ನು ಅಗಲುವುದು ಕಷ್ಟವಾಗಿದೆ.
2. ಯಾರೋ ಶರಣರು ಹೋದಾಗ ಈ ರೀತಿ ವ್ಯಥೆಪಟ್ಟಿರಬಹುದು ಅಂದುಕೊಳ್ಳೋಣವೇ ? ಇಲ್ಲ. ಶರಣರನ್ನು ಬಸವಣ್ಣನವರೇ ಅಗಲಿದ್ದಾರೆ.
3. ಈ ಅಗಲುವಿಕೆ ಅವರಿಗೆ ಇಷ್ಟವಿಲ್ಲದ್ದು ; ಒತ್ತಾಯದ ಆಜ್ಞೆ–ಹೊರಗಿನಿಂದ ಬಂದುದು.
4. ಪರಿಣಾಮವಾಗಿ ಒಬ್ಬರೇ **ಆಗಿದ್ದಾರೆ.**

ಸ್ವಯಂ ಇಚ್ಛೆಯಿಂದ ಅವರು ಹೊರಟಿದ್ದರೆ ಕೆಲವರು ಆತ್ಮೀಯರನ್ನಾದರೂ ಅವರು ಸಂಗಡ ಕರೆದೊಯ್ಯಬಹುದಿತ್ತು. ಇಲ್ಲಿ ಸಂಗಡ ಕರೆದೊಯ್ಯಲು ಅವಕಾಶವಿಲ್ಲ; ಇದು ಯಾವಾಗ ಸಾಧ್ಯ ? ಗಡಿಪಾರು ಇದ್ದಾಗ ಮಾತ್ರ; ಶರಣರನ್ನು ಅಗಲಲು ಇಷ್ಟವಿಲ್ಲದಿದ್ದರೂ ಅಗಲ ಬೇಕಾದುದು, ಒಬ್ಬರೇ ಆದುದು–ಇವೆರಡೂ ಧರ್ಮ

ಪಿತರ ಗಡಿಪಾರು ಆಜ್ಞೆಯನ್ನು ದೃಢಪಡಿಸುತ್ತವೆ.

ಕರವೆ ಕಪ್ಪರ ಒಡಲೇ ಜೋಳಿಗೆ
ಆಕಾಶವೇ ಹೊದಿಕೆ, ಭೂಮಿಯೆ ಖಟ್ವಾಂಗ
ಸರ್ವ ಸಂಗ ನಿವೃತ್ತಿಯ ಮಾಡಿ ಬಸವಣ್ಣ ಹೋದುದನು ಕಂಡೆ,
ಕೂಡಲ ಚನ್ನ ಸಂಗಮದೇವಾ, [ಚ, ಬ. ವ. ೧೩೦೪]

ಎಲ್ಲರನ್ನೂ ಬಿಟ್ಟು ಹೋಗುವ ಈ ಸ್ಥಿತಿ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಒಂದು ವೇಳೆ ರಾಜಾಜ್ಞೆ ಮತ್ತು ಅದನ್ನು ಪಾಲಿಸಬೇಕೆಂಬ ಬಸವ ಗುರುವಿನ ಆಜ್ಞೆ ಶರಣರನ್ನು ಕಟ್ಟಿ ಹಾಕಿರದಿದ್ದರೆ ಅವರು ತಮ್ಮ ಪ್ರಾಣಸ್ವರೂಪರಾದ ಬಸವಣ್ಣನವರನ್ನು ಹೀಗೆ ಒಂಟಿಯಾಗಿ ಬಿಟ್ಟು ಕೊಡುತ್ತಿದ್ದರೆ ? ಧರ್ಮಪಿತರ ವೇಷ ಆಗ ಹೇಗಿತ್ತು ?

ಸಮತೆ ಎಂಬ ಕಂಥೆಯ ತೊಟ್ಟು,
ಸುಬುದ್ಧಿ ಎಂಬ ಟೊಪ್ಪರವನಿಕ್ಕಿ,
ವಿಷಯವೆಂಬ ಹಾವುಗೆಯ ಮೆಟ್ಟಿ,
ತಮಂಧವೆಂಬ ಕುಣಿಯ ಬೀಳದೆ
ಮದವೆಂಬ ಚೇಳ ಮೆಟ್ಟದೆ.
ವೈರಾಗ್ಯವೆಂಬ ಕೊರಡನೆಡಹದೆ
"ಭಕ್ತಿ ಭಿಕ್ಷಾಂದೇಹಿ" ಎಂಬ ಬಸವಣ್ಣ ಕಪ್ಪಡಿಗೆ ಬಂದ
ಕೂಡಲ ಚನ್ನ ಸಂಗಮದೇವಾ. [ಚ. ಬ. ವ. 1089]

ನಿಲುವಂಗಿ, ತಲೆಗೆ ಟೋಪಿ, ಕಾಲಿನಲ್ಲಿ ಹಾವುಗೆ. ಈ ವಚನವು ಹಲವಾರು ಸತ್ಯಗಳನ್ನು ಸ್ಥಿರೀಕರಿಸುತ್ತದೆ.

ಭಕ್ತಿಯ ಭಿಕ್ಷೆಯನ್ನು ಅವರು ಜನರಿಂದ ಬೇಡಲು ಬಂದರು ಮತ್ತು ಕಪ್ಪಡಿಗೆ ಬಂದರು.

ಇದರಿಂದ ದಾರಿಯಲ್ಲಿ ಎಲ್ಲೋ ವಧೆಯಾದರು ಎಂಬ ಅಸಂಬದ್ಧ ಊಹಾಪೋಹವನ್ನು ಇದು ನಿವಾರಿಸುತ್ತದೆ. ಹೀಗೆ ವಚನಗಳಲ್ಲಿಯೇ ಸಿಗುವ ವಿವರಗಳಿಂದ ಇಂದು ನಾವು ಸತ್ಯವನ್ನು ಸರಿಯಾಗಿ ತಿಳಿದು, ಊಹಾಪೋಹಗಳನ್ನು ನಿವಾರಿಸಬೇಕು.

ಇನ್ನು ಚಲಾವಣೆಯಲ್ಲಿರುವ ಐತಿಹ್ಯಗಳು ಮೂರು ಇವೆ. ಹೊಕ್ರಾಣೆ ಎಂಬ ಎರಡು ಸ್ಥಳಗಳು ಇವೆ. ಒಂದು, ಬಸವ ಕಲ್ಯಾಣಕ್ಕೆ ಸಮೀಪದ ಗುಲಬರ್ಗಾ ಜಿಲ್ಲೆಯಲ್ಲಿ; ಇನ್ನೊಂದು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದ ಸಮೀಪ. ಇದ ಕೂಡಲಸಂಗಮಕ್ಕೆ ಸಮೀಪವಾಗುತ್ತದೆ. ಜನತೆಯ ಬಾಯಿಯಲ್ಲಿ ಸಾಗಿ ಬಂದಿರುವುದು ಏನೆಂದರೆ, "ಬಸವಣ್ಣನವರಿಗೆ ಈ ಹದ್ದಿನಿಂದ ಒಳಬಂದರೆ ಆಣೆಯಾದೀತು; ಎಂದು ರಾಜಾಜ್ಞೆ. ಆದ್ದರಿಂದ ಇದು ಹೊಕ್ರಾಣೆ." ಅಲ್ಲಿಯ ಜನ ಈ ನಂಬಿಕೆಯನ್ನು ದೃಢವಾಗಿ ಹೊಂದಿದ್ದಾರೆ. ಬಸವಣ್ಣನವರು ಈ ಗ್ರಾಮವನ್ನೇ ಹದ್ದನ್ನಾಗಿ ತಿಳಿದು ಅದರ ಒಳಗೆ ಬರಬಾರದು ಎಂಬುದು ರಾಜಾಜ್ಞೆಯ ಇಂಗಿತ. ನನಗೆ ಬಹುದಿನಗಳವರೆಗೆ ಒಂದು ಸಂದೇಹವಿತ್ತು ; ಗಡಿ ಎಂದರೆ ರಾಜ್ಯದ ಗಡಿ ಇರಬೇಕು.

ಸಂಗಮವೂ ಸಹ ಆಗ ಚಾಲುಕ್ಯರ (ಕಲಚೂರಿ ಬಿಜ್ಜಳನ) ಗಡಿಯಲ್ಲೇ ಇದ್ದಿತು.
ಅಂದಾಗ ಬಸವಣ್ಣನವರು ಇಲ್ಲಿಗೆ ಹೇಗೆ ಬಂದರು ? ರಾಜ್ಯದ ಗಡಿ ವಿಸ್ತಾರವಾಗಿ
ಇರುತ್ತದೆ. ಯಾವ ಪ್ರದೇಶದಲ್ಲಿ ಅವರ ಅನುಯಾಯಿಗಳು ಹೆಚ್ಚು ಇರುತ್ತಾರೋ,
ಅವರು ರೊಚ್ಚಿಗೆ ಏಳುತ್ತಾರೋ ಅಂಥ ಸ್ಥಳಗಳಿಂದ ಹೊರಗಿಡಲಾಗುತ್ತದೆ. ಆದ್ದರಿಂದ
ಎರಡು ಗಡಿಗಳನ್ನು ಗುರುತಿಸಲಾಗಿದೆ. ಒಂದು ಗುಲಬರ್ಗಾ ಜಿಲ್ಲೆಯ ಹೊಕ್ರಾಣಿ,
ಇನ್ನೊಂದು ಬಿಜಾಪುರ ಜಿಲ್ಲೆಯ ಹೊಕ್ರಾಣಿ [ಹೊಕ್ಕರೆ ಆಣೆ ಎಂಬುದು ಗ್ರಾಮೀಣ
ಭಾಷೆಯಲ್ಲಿ ಹೊಕ್ರಾಣಿ ಆಗಿದೆ].

ವಿಶ್ವಗುರು ಬಸವಣ್ಣನವರು ರಾಕ್ಷಸ ನಾಮ ಸಂವತ್ಸರದ ಫಾಲ್ಗುಣ ಮಾಸದ
ದ್ವಾದಶಿಯಂದು ರಾಜಸಭೆಯಲ್ಲಿ ಚರ್ಚಿಸಿ, ಅಧಿಕಾರ ತ್ಯಾಗಮಾಡಿ ಸಂಜೆಯ
ಸುಮಾರಿಗೆ ಮಹಾಮನೆಗೆ ಬಂದಿದ್ದಾರೆ, ಅಂದಿನ ಅನುಭವಗೋಷ್ಠಿ ತುರ್ತು
ಸಭೆಯಾಗಿ ಮಾರ್ಪಟ್ಟಿದೆ. ಸಭೆ ನಡೆದಿರುವಾಗಲೇ ಗಡಿಪಾರಿನ ಆಜ್ಞೆ ತಲುಪಿದೆ.
ಬೆಳಗಾಗುವುದರಲ್ಲಿ [ಅಶ್ವಾರೂಢರಾಗಿ, ಪಟುಭಟರ ಕಾವಲಿನಲ್ಲಿ ಗುರುತಿಸಿದ ಸ್ಥಳ
ವನ್ನು ಅಂದರೆ ಒಂದನೆಯ ಹದ್ದನ್ನು] ಹೊಕ್ರಾಣೆಯನ್ನು ದಾಟಬೇಕು. ಎರಡನೆಯ
ಹದ್ದು ಹೊಕ್ರಾಣೆಯ ಒಳಗೆ ಅವರು ಬರತಕ್ಕದಲ್ಲ ಎಂಬ ಅಂಶಗಳನ್ನು ರಾಜಾಜ್ಞೆ
ಹೊಂದಿದೆ.

ಹೀಗೆ ಅವರು ಗಡಿಪಾರು ಸ್ವೀಕರಿಸಿ ಸೈನಿಕರ ಕಾವಲಿನಲ್ಲಿ ಒಬ್ಬರೇ ಕಲ್ಯಾಣ–
ದಿಂದ ಹೊರಡುವರು. ನಮಗೆ ಅವರು ಸಂಚರಿಸಿದ ವಾಸ್ತವ್ಯ ಮಾಡಿದ ಸ್ಥಳಗಳಲ್ಲಿ
'ದಂಡಗೊಂಡ ಬಸವಣ್ಣನ ಗುಡಿಗಳು' ಕಾಣಬರುತ್ತವೆ. ಇನ್ನೊಂದು ಐತಿಹ್ಯ
ವೇನೆಂದರೆ ಹೊಕ್ರಾಣೆಯಲ್ಲಿ ಓರ್ವ ಶ್ರದ್ಧಾವಂತ ಅಜ್ಜಿ ಇದ್ದಳು. ಅಲ್ಲಿಗೆ ಆಗಮಿಸಿದ
ಧರ್ಮಪಿತರು ತಮ್ಮ ರಾಜಪೋಷಾಕುಗಳನ್ನು ತೆಗೆದುಕೊಂಡು ಸರಳ ವಸ್ತ್ರಗಳನ್ನು
ಧರಿಸಿ ಮುಂದೆ ಹೊರಟರು. ಆ ಅಜ್ಜಿ ಒಂದು ಪೆಟ್ಟಿಗೆಯಲ್ಲಿಟ್ಟು ಮುಚ್ಚಿದಳು.
ಇಂದಿಗೂ ಆ ಪೆಟ್ಟಿಗೆ ಹಾಗೆಯೇ ಇದೆ, ನಾವೂ ನೋಡಿದ್ದೇವೆ. ಆದರೆ ಆ ಮನೆ
ಯವರು ಕತ್ತಲೆಯ ಕೋಣೆಯೊಂದರಲ್ಲಿ ಇಟ್ಟುಬಿಟ್ಟಿದ್ದಾರೆ. ಎಷ್ಟೇ ಹೇಳಿದರು
ಪೆಟ್ಟಿಗೆಯನ್ನು ಬಿಚ್ಚಲು ಸಿದ್ಧರಿಲ್ಲ. ಅವರು ಬ್ರಾಹ್ಮಣರಿದ್ದು, ಈ ವಿಷಯದಲ್ಲಿ
ಕುತೂಹಲವೂ ಇಲ್ಲ ಭಕ್ತಿಯೂ ಇಲ್ಲ. ಮೂಢನಂಬಿಕೆಯಿಂದ ತಮ್ಮ ಮನೆಯಲ್ಲಿ
ಪೆಟ್ಟಿಗೆ ಇಟ್ಟುಕೊಂಡಿದ್ದಾರೆ ಮತ್ತು ಈ ರೀತಿ ಮಾಡಬಾರದು ಒಳಗೇನಿದೆಯೋ
ನೋಡೋಣ ಎಂದರೆ, ಇದು ಆ ಬಸವಣ್ಣನವರಿಗೆ ಸೇರಿದ್ದಲ್ಲ, ಕೊಡ್ಯೆಕಲ್ ಬಸವಣ್ಣ
ನವರಿಗೆ ಸೇರಿದ್ದು ಎಂದು ಒರಟಾಗಿ ಹೇಳುತ್ತಾರೆ.

ಚನ್ನಬಸವಣ್ಣನ ವಚನ ೧೩೦೪, 'ಕರವೆ ಕಪ್ಪರ' ಇದರಲ್ಲಿ ಬಸವಣ್ಣನವರು
ಏಕಾಕಿಯಾಗಿ, ಎಲ್ಲ ಬಿಟ್ಟು ಹೋದರು ಎಂಬ ಚಿತ್ರಣವಿದ್ದರೆ, ಸಮತೆ ಎಂಬ
ಕಂಥೆಯ ತೊಟ್ಟು' ಎಂಬ ವಚನದಲ್ಲಿ [೧೦೪೯] ಯಾವ ವೇಷಧರಿಸಿ ಕಪ್ಪಡಿಗೆ
ಬಂದರು ಎಂಬ ವರ್ಣನೆ ಇದೆ. ಮಾರ್ಗಮಧ್ಯದಲ್ಲಿ ತಮ್ಮ ಪೋಷಾಕು ಬದಲಾಯಿ
ಸಿರುವುದು ಇದರಿಂದ ದೃಢಗೊಳ್ಳುವುದು. ಈ ಎಲ್ಲ ಮಾತಂಗಳು ಗಡಿಪಾರನ್ನು
ದೃಢೀಕರಿಸುತ್ತವೆ.

★ ★

[8 ನೇ ಪುಟದಿಂದ ಮುಂದುವರಿದದ್ದು]

ಸಾತ್ವಿಕರು, ನಿರ್ಮಲ ಮನಸ್ಸಿನವರು, ಮುಗ್ಧರು. ಒಂದು ವೇಳೆ 'ಹೆಣ್ಣು ಮಕ್ಕಳಿಗೇಕೆ
ಗುರುವಾಗುವ ಅವಕಾಶವಿಲ್ಲ ; ನಿಮ್ಮ ಮಠಕ್ಕೆ ಮಹಿಳೆಯರನ್ನೇ ಏಕೆ ಗುರುವಾಗಿ
ಮಾಡಬಾರದು ?' ಎಂಬ ಸಾಮಾಜಿಕ ಪ್ರಜ್ಞೆಯೊಡನೆ ಶರಣಮ್ಮ ತಾಯಿಯವರು
ಮೂಜಗಂರಂಥವರನ್ನು ಪ್ರಶ್ನಿಸಿದ್ದರೆ ಆಗ ಇವರು ಪ್ರಶಂಸಿಸುವುದು ತಿಳಿಯುತ್ತಿತ್ತು.
ತನ್ನ ಉತ್ತರಾಧಿಕಾರಿಯನ್ನಾಗಿ ಓರ್ವ ಮಹಿಳೆಯನ್ನೇ ಮಾಡಿ ಹೋಗುವೆ ಎಂದು
ಶರಣಮ್ಮನವರು ಛಲ ತೊಟ್ಟಿದ್ದರೆ ಆಗ ಇವರ ಹೊಗಳಿಕೆ ಟುಸ್ಸೆನ್ನದೆ ಇರುತ್ತಿರಲಿಲ್ಲ.

ಮಹಾಸಂತರಾದ ಭಕ್ತ ಕನಕದಾಸರು ಹಾಡಲಿ, ಭಜನೆ ಮಾಡಲಿ, ಕುಣಿ
ದಾಡಲಿ ಬೇಡ ಎನ್ನುವವರಾರು? ಆದರೆ ಗರ್ಭಗುಡಿಯಲ್ಲಿರುವ ಕೃಷ್ಣನ ದರ್ಶನ
ಮಾಡುತ್ತೇವೆ ಎಂದಾಗ ತಾನೆ ಸಮಸ್ಯೆ ಏಳುವುದು.

ನಾನು ಈ ಕರುಣಾಜನಕ ಕಥೆ ಕೇಳಿದ್ದೇನೆ. ಉದ್ದೇಶಪೂರ್ವಕವಾಗಿ ಹೆಸರು
ಗಳನ್ನು ಕಾಣಿಸಿಲ್ಲ. ಹೀಗೊಂದು ಊರು; ಅಲ್ಲಿ ಸಂಪ್ರದಾಯಸ್ಥ ವೀರಶೈವ ಮಠ;
ಸರ್ವಾಧಿಕಾರತ್ವ. ಅದೇ ಊರಲ್ಲಿ ಒಂದು ಮಠ, ಅದಕ್ಕೆ ಲಿಂಗಾಯತ ಭಕ್ತವರ್ಗದ
ಓರ್ವರು ಸ್ವಯಂ ಇಚ್ಛೆಯಿಂದ ಆದ ಸ್ವಾಮಿಗಳು. ಸಂಪ್ರದಾಯ ಮಠದವರು
ತಾಕೀತು ಮಾಡಿ ಹೇಳಿದರು, "ನೀವು ಗುರು ಎಂದುಕೊಳ್ಳಬಾರದು, ಭಕ್ತರ ಮನೆಗೆ
ಜಿನ್ನಹ ಪಾದಪೂಜೆಗೆ ಹೋಗಕೂಡದು. ಏನಿದ್ದರೂ ಬೋಧೆ ಮಾಡುತ್ತ ಮಠದಲ್ಲಿರ
ಬೇಕು" ಎಂದು ಹುಕುಂ ಹೊರಡಿಸಿದರು.

[ಸಂಪ್ರದಾಯಸ್ಥ ಸ್ವಾಮಿಗಳು ಕೆಲವರಲ್ಲಿ ಕೆಲವು ಪರಿಕಲ್ಪನೆಗಳಿವೆ. ಪ್ರವಚನ–
ಬೋಧೆ ಮಾಡುವುದು ಕೀಳು; ಆಶೀರ್ವಚನ ಮಾಡುವುದು ಶ್ರೇಷ್ಠ ಎಂಬುದು ಅಂಥ
ಒಂದು ನಂಬಿಕೆ.]

ಆ ಸ್ವಾಮಿಗಳು ಸಾತ್ವಿಕರು; ಜನರು ಪ್ರೀತಿ–ಭಕ್ತಿಯಿಂದ ಅವರನ್ನು ಪಾದಪೂಜೆ
–ಬಿನ್ನಹಕ್ಕೆ ಕರೆದೊಯ್ಯತೊಡಗಿದರು. ಅವರ ಕೀರ್ತಿ ಬೆಳೆಯತೊಡಗಿತು, ಆಗ
ಈ ಸಂಪ್ರದಾಯ ಮಠದ ಸ್ವಾಮಿಗಳಿಗೆ ತುಂಬಾ ಈರ್ಷೆಯುಂಟಾಯಿತು, ಅವ
ರನ್ನು ಅಂಗವಿಹೀನ ಮಾಡಿದರೆ ಜನರು ಮನ್ನಣೆ ಕೊಡರು ಎಂದು ಆಲೋಚಿಸಿದರು.
ಒಂದು ದಿನ ನಸುಕಿನಲ್ಲಿ ಆ ಸ್ವಾಮಿಗಳು ಬಹಿರ್ದೆಸೆಗೆ ದೂರದ ಬಯಲಿಗೆ ಹೋದಾಗ
ದಾರಿಯಲ್ಲಿ ನಮಸ್ಕಾರ ಮಾಡಲು ಹೋದಂತೆ ಹೋದ ಒಬ್ಬನು ಸ್ವಾಮಿಗಳ ಪಾದ
ಕತ್ತರಿಸಿ, ಕತ್ತಲೆಯಲ್ಲಿ ಕಣ್ಮರೆಯಾದನಂತೆ. ಈ ಸಂಚಿನ ಹಿಂದೆ ಆ ದೊಡ್ಡಮಠದ
ಸ್ವಾಮಿಗಳು ಇದ್ದರಂತೆ.

ಮುಂದೆ ಪಾದವಿಹೀನವಾದ ಸ್ವಾಮಿಗಳು ನೊಂದುಕೊಂಡು ಜೀವಂತ ಸಮಾಧಿ
ಹೊಕ್ಕರಂತೆ. ಇನ್ನೊಂದು ಚೋದ್ಯದ ಸಂಗತಿ ಕೇಳಿದೆ. ಹೇಳಿದ್ದು ಬಹಳ ಹಿಂದಿನ

ಕಥೆ. ಈಗ ಆ ಮಠಕ್ಕೆ ಅಧಿಕಾರಿಯನ್ನು ಸಂಚು ಹೂಡಿದ್ದ ಮಠದ ಪರಂಪರೆಯವರೇ ಆಯ್ಕೆ ಮಾಡಿದ್ದಾರಂತೆ !

ನನ್ನ ಸ್ವಾನುಭವದ ಒಂದು ಪ್ರಸಂಗವನ್ನು ಇಲ್ಲಿ ಹೇಳಲು ಅಪೇಕ್ಷೆಯಾಗಿದೆ. ಬಹುಶಃ ನಾನು ಎಂ. ಎ. ಓದಿ ಪೂರೈಸಿದ್ದೆ ಅಂತ ಕಾಣುತ್ತದೆ; ಮೂರುಸಾವಿರ ಮಠದಿಂದ ಬಸವ ಜಯಂತಿಗೆ ಮುಖ್ಯ ಅತಿಥಿ ಎಂದು ಆಹ್ವಾನ ಬಂದಿತು. ಸಂತೋಷದಿಂದ ಒಪ್ಪಿಹೋದೆ. ಮಠದ ಅಟ್ಟದ ಮೇಲೆ ಒಂದು ಪಡಸಾಲೆಯಲ್ಲಿ ಕಾರ್ಯಕ್ರಮ. ಬಸವ ತತ್ತ್ವದ ಪುನರುತ್ಥಾನಕ್ಕೆ ಚಳುವಳಿ ಆರಂಭಿಸಿದ್ದ, ಈಗ ಮುಪ್ಪಿನ ಚಿಪ್ಪಿನಲ್ಲಿರುವ ಶರಣೆ ಸಂಗಮ್ಮ ತಾಯಿ ಕರವೀರ ಶೆಟ್ಟರು, ಶರಣ. ಶಿವಪ್ಪ ಉಮದಿಯವರು ಮುಂತಾದವರು ಮಠಕ್ಕೆ ಬಂದಿದ್ದರು. ಹೀಗೆ ಹೇಳುವಲ್ಲಿ ಅರ್ಥವಿದೆ. ಜಾತಿವಾದಿ ಸಂಪ್ರದಾಯದ ವಿರುದ್ಧ ಹುಬ್ಬಳ್ಳಿ ಶ್ರೀಗುರು ಬಸವ ಮಂಟಪದವರು ಒಂದು ಆಂದೋಲನ ಆರಂಭಿಸಿದ್ದರಿಂದ ಸಂಪ್ರದಾಯ ಮಠಾಧಿಕಾರಿಗಳು ಅಸಹನೆಗೊಂಡಿದ್ದರು. ಶರಣರ ಗುಂಪಿನವರೂ ಸಂಪ್ರದಾಯ ಮಠಗಳಿಗೆ ಹೋಗುತ್ತಿರಲಿಲ್ಲ. ನಾಮಕರಣ–ಪೂಜಾದಿಕ್ರಿಯೆ, ವಿವಾಹ–ದೀಕ್ಷೆ, ಶವಸಂಸ್ಕಾರ ಮುಂತಾಗಿ ಈ ಶರಣರು ಮಾಡತೊಡಗಿದ್ದರು. ಪೂಜ್ಯ ಸಂಗಮ್ಮ ತಾಯಿಯವರು ದೀಕ್ಷೆ ಕೊಡುತ್ತಿದ್ದರು. ಹೀಗೆ ಶರಣ ಚಳುವಳಿ–ಶಿವಯೋಗ ಮಂದಿರದ ಸಂಪ್ರದಾಯದ ನಡುವೆ ಶೀತಲ ಸಮರ ನಡೆದಿತ್ತು; ನಾನು ಆಹ್ವಾನಿತಳಾಗಿದ್ದರಿಂದ ಕುತೂಹಲದಿಂದ ಇವರೆಲ್ಲ ಮಠಕ್ಕೆ ಬಂದಿದ್ದರು.

ತುಂಬಾ ಆಶ್ಚರ್ಯಕರ ಘಟನೆ ನಡೆಯಿತು. ಮೂಜಗಂ ಅವರು ಎತ್ತರದ ಕುರ್ಚಿಯ ಮೇಲೆ, ಇನ್ನು ಕೆಲವು ಸ್ವಾಮಿಗಳು ಬೇರೆ ಬೇರೆ ಎತ್ತರದ ಕುರ್ಚಿಯ ಮೇಲೆ, ಅಲ್ಲಿ ಓದುವ ವಟುಗಳು, 10–12 ವರ್ಷಗಳ ಚುಲ್ಟಾರಿಗಳು ಸಹ ಒಂದೊಂದು ಮಣೆ–ಆಸನದ ಮೇಲೆ ಕೂತಿದ್ದರು; ಆಹ್ವಾನಿತಳಾಗಿ ಬಂದಿದ್ದ ನನಗೆ ನೆಲದ ಮೇಲೆ ಒಂದು ಜಾಗ ತೋರಿಸಿದರು. ನಾವು ಒಯ್ದಿದ್ದ ಆಸನ ಹಾಕಿಕೊಂಡು ಕುಳಿತು ಭಾಷಣ ಮಾಡಿ ಬಂದೆ. ಇದು ನನಗಿಂತಲೂ ಹೆಚ್ಚಿಗೆ ಶರಣ; ಶಿವಪ್ಪ ಉಮದಿ, ಶರಣೆ ಸಂಗಮ್ಮತಾಯಿ ಮುಂತಾದವರನ್ನು ನೋಯಿಸಿತು. ಇದು ಬಸವ ತತ್ತ್ವಕ್ಕೆ ಆದ ಅವಮಾನವೆಂದೇ ಭಾವಿಸಿದರು. ಅಯ್ಯನವರೆಂದ ಮಾತ್ರಕ್ಕೆ ಆಕಾಶದಿಂದ ಇಳಿದು ಬರುವರೆ? ಅಯ್ಯನವರಲ್ಲದವರಿಗೆ ಗೌರವ ಕೊಡಬಾರದೆಂಬುದು ಸೂಕ್ತ ಶಿಷ್ಟಾಚಾರವೆ ? ಮತ್ತು ನಾನಾಗಲೇ ಜಂಗಮ ಲಾಂಛನಧಾರಿಯಾಗಿದ್ದೆ.

ಮುಂದೆ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಪ್ರವಚನವಾಯಿತು; ಅದೆಷ್ಟು ಅದ್ಭುತವಾಗಿ ಆಯಿತೆಂದರೆ ಹುಬ್ಬಳ್ಳಿ ಇತಿಹಾಸದಲ್ಲೇ ಅಂಥ ಕಾರ್ಯಕ್ರಮ ನಡೆದಿರಲಿಲ್ಲ; ಆರಂಭದ ದಿನವೇ ಮೂಜಗಂ ಅವರನ್ನು ಆಹ್ವಾನಿಸಲಾಯಿತು. ಅವರು

ಬಂದಾಗ ಮಠಕ್ಕೆ ಬರಲು ನಮ್ಮನ್ನು ಆಹ್ವಾನಿಸಿದರು, ಒತ್ತಾಯಪೂರ್ವಕವಾಗಿಯೇ ಆಹ್ವಾನಿಸಿದರು. ಪ್ರವಚನ ನಡೆದಾಗ ಮಧ್ಯೆ ಒಮ್ಮೆ ತಾವಾಗಿಯೇ ನಾವಿದ್ದಲ್ಲಿಗೆ ಬಂದು ಬಿಟ್ಟರು; [ಸಹೃದಯತೆ–ಸರಳತೆಗಳು ಇತರರಿಗಿಂತ ಹೆಚ್ಚು ಇವರಲ್ಲಿವೆ, ಒಣ ಪ್ರತಿಷ್ಠೆ, ಆಢ್ಯತೆ ಇವರಲ್ಲಿ ಇಲ್ಲ, ಅದನ್ನು ನಾವು ಬಹಳ ಮೆಚ್ಚಿದ್ದೇವೆ. ಆದರೆ ತಾತ್ತ್ವಿಕ ನಿಖರತೆ–ನಿಷ್ಠೆ ಇಲ್ಲದ್ದರಿಂದಲೇ ಅವರ ಬಗ್ಗೆ ನಮ್ಮ ಮುನಿಸು.] "ಆಹ್ವಾನಿಸಿದರೂ ಏಕೆ ಬರುತ್ತಿಲ್ಲ?" ಎಂದರು. "ಕಾಲ ಬಂದಾಗ ಬರುವೆ" ಎಂದೇ ಹೇಳಿದೆ. ಪ್ರವಚನದ ಮುಕ್ತಾಯದ ಮರುದಿನ ಸತ್ಕಾರ ಇಟ್ಟುಕೊಳ್ಳುವುದಾಗಿ ಮಠದ ಹಿರಿಯ ಭಕ್ತರು ಆಹ್ವಾನಿಸ ಬಂದರು. ಶರಣ ಉಮದಿ ಶಿವಪ್ಪನವರು ಹೇಳಿದರು, "ಅಂದು ಮಾಡಿರುವ ಅವಮಾನ ನಾವು ಮರೆತಿಲ್ಲ, ನೀವು ಒಮ್ಮೆಲೇ ಒಪ್ಪಿಕೊಳ್ಳಬೇಡಿ. ಸಮಾನ ಸ್ಥಾನ ಕೊಡಬೇಕು." ಎಂದು ನನಗೆ ತಿಳಿಸಿ, ಮಠದ ಭಕ್ತರೊಡನೆ ಸಮಾಲೋಚಿಸಿದರು. ಅವರು ಒಪ್ಪಿದರು; ಪ್ರವಚನ ಮುಗಿದ ಮರುದಿವಸ ಯೋಗ್ಯ ರೀತಿಯಲ್ಲಿ ಸನ್ಮಾನಿಸಿದರು. ಸರಿಯಾದ ರೀತಿಯಲ್ಲಿ ಗೌರವಿಸದ ಹೊರತು ಅಲ್ಲಿಗೆ ಕಾಲಿಡಬಾರದು ಎಂದು ಧ್ರುವ ಪ್ರತಿಜ್ಞೆ ನಾನೂ ತೊಟ್ಟಿದ್ದೆ; ಫಲವಂತಿಕೆ ನನಗೆ ಬಂದುದೇ ಧ್ರುವನ ಕಥೆ ಕೇಳಿ.

ಒಂದು ಕುರ್ಚಿ, ಒಂದು ಶಾಲು ನಶ್ವರ ವಸ್ತುಗಳು. ಆದರೆ ಜಾತಿ ಹಿಡಿದು, ಅಯ್ಯನವರ ವಂಶದವರಲ್ಲದವರನ್ನು ಅವರೆಂಥದೇ ವ್ಯಕ್ತಿತ್ವ ಹೊಂದಿದ್ದರೂ ಗೌರವಿಸಬಾರದು ಎಂಬ ಸಂಪ್ರದಾಯವಾದಿಗಳ ದೃಷ್ಟಿಕೋನ ನನ್ನಲ್ಲಿ ಅಸಹನೆ ಹುಟ್ಟಿಸಿತ್ತು. ಬಸವ ಧರ್ಮವಂತೂ ಗುಣಗ್ರಾಹಿ ಧರ್ಮ ; ಇಲ್ಲಿ ಜಾತಿಗೆ ಕಾಸಿನ ಕಿಮ್ಮತ್ತೂ ಇಲ್ಲ. ಗುಣ ಮತ್ತು ಪ್ರತಿಭೆಗೇ ಇಲ್ಲಿ ಗಣನೀಯ ಸ್ಥಾನ. ಹೀಗೆ ನಮ್ಮ ಹೋರಾಟ ವೈಯಕ್ತಿಕ ಕೀರ್ತಿ–ಪ್ರತಿಷ್ಠೆಗಾಗಿ ಅಲ್ಲ, ಸಾಮಾಜಿಕ ಹಕ್ಕು ಬಾಧ್ಯತೆಗಳಿಗಾಗಿ. ಈ ಸಂಪ್ರದಾಯವಾದಿಗಳು ಮಠಗಳಿಗೆಲ್ಲ ಭಕ್ತವರ್ಗದವರನ್ನು ಅಧಿಕಾರಿಗಳನ್ನು ಮಾಡುವುದು ಅತ್ತಲಿರಲಿ, ಯಾರು ಬೇಕಾದರೂ ಗುರು–ಜಂಗಮರು ಅರ್ಹತೆಯ ಆಧಾರದ ಮೇಲೆ ಆಗಲು ಬರುತ್ತದೆ ಎಂದು ಅಧಿಕೃತವಾಗಿ ಒಪ್ಪಿದರೆ ಸಾಕು.

ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ಆಡಳಿತವಿತ್ತು. ಕಪ್ಪು ಜನರು ರಾಜಕೀಯ ಅಧಿಕಾರ ಪಡೆಯುವುದಿರಲಿ, ಮತದಾನದ ಹಕ್ಕು ಸಹ ಹೊಂದಿರಲಿಲ್ಲ. ಅದಕ್ಕಾಗಿಯೇ ನೆಲ್ಸನ್ ಮಂಡೇಲಾರ ನೇತೃತ್ವದಲ್ಲಿ ಹೋರಾಟ ನಡೆದಿತ್ತು. ಮತದಾನದ ಹಕ್ಕು ದೊರೆತು, ಕಪ್ಪು ಜನರು ಅಧಿಕಾರಕ್ಕೆ ಬಂದು ನೆಲ್ಸನ್ ಮಂಡೇಲಾ ಗದ್ದುಗೆ ಏರಿದರು. ಬಹುಸಂಖ್ಯಾತ (ಭಕ್ತ ವರ್ಗದವ)ರ ಹಕ್ಕು ನಿರಾಕರಿಸಿ ಕೇವಲ ಒಂದು ಜಾತಿಯವರಿಗೆ ಗುರು–ಜಂಗಮ–ಜಗದ್ಗುರುತ್ವದ ಹಕ್ಕು ಸೀಮಿತಗೊಳಿಸಿರುವ ಬಸವ ಸಂವಿಧಾನಕ್ಕೆ ಹೊರತಾದ ಜಡ ಸಂಪ್ರದಾಯದ ವಿರುದ್ಧವೇ ನಮ್ಮ ಹೋರಾಟ.

ಬಸವಣ್ಣನವರ ವಿಚಾರಧಾರೆ ಸಾಮಾಜಿಕ ಪರಿವರ್ತನೆಯನ್ನು ಬಯಸುವುದೇ ವಿನಾ ಕೇವಲ ಆತ್ಮೋದ್ಧಾರದಲ್ಲಿ ತೊಡಗುವುದಲ್ಲ.

4. ಬಸವ ತತ್ತ್ವಪ್ರಚಾರಕ್ಕಾಗಿ ಮೂಜಗಂ ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದಾರೆ. ಇಂಥವರು ಎಂದಾದರೂ ಬಸವ ತತ್ತ್ವಕ್ಕೆ ವಿರೋಧ ಮಾಡುತ್ತಾರೆಯೆ ? ಇದನ್ನು ಜನತೆ ಅರಿತುಕೊಳ್ಳಲಿ ಎಂದಿದ್ದಾರೆ ದಲಿತ ಧುರೀಣ ದುರ್ಗಪ್ಪನವರು. (?).

ಹಣವಿದೆ ಎಂದೋ ಅಥವಾ ಕೀರ್ತಿವಾರ್ತೆಗಾಗಿಯೋ ಅಥವಾ ಏನೂ ಕೆಲಸ ಮಾಡುತ್ತಿಲ್ಲವಲ್ಲಾ ಎಂದು ಜನರು ಅಂದಾರು ಎಂಬ ಭಯಕ್ಕೋ ಖರ್ಚು ಮಾಡಿರಬಹುದು. ಹಣ ಖರ್ಚು ಮಾಡಿದ ಮಾತ್ರಕ್ಕೆ ಆ ತತ್ತ್ವವನ್ನು ಒಪ್ಪಿ ಪಾಲಿಸುತ್ತಾರೆಂದೇನೂ ಅರ್ಥವಲ್ಲ. ಅತ್ಯಂತ ಆರ್ಥಿಕ ಸಂಕಷ್ಟದಲ್ಲಿರುವ ಕೆಲವು ಶರಣರು ಯಾವುದೇ ರೀತಿ ಪುಸ್ತಕ ಮುದ್ರಿಸಲು, ಬಸವ ತತ್ತ್ವ ಪ್ರಚಾರ ಮಾಡಲಾಗದೇ ಇರುವುದರಿಂದ ಅವರು ಬಸವ ತತ್ತ್ವಪಾಲಕರಲ್ಲ ಎಂದು ಹೇಳಲಾಗುವುದಿಲ್ಲ. ಮೂರು ಸಾವಿರ ಮಠದ ರಜತೋತ್ಸವದ ಪ್ರಕಟಣೆ 'ಮಡಿವಾಳ ಮಾಚಿದೇವರ ವಚನಗಳು' ಓದುತ್ತಿದ್ದೆ. ಆಗ ಅನ್ನಿಸಿತು "ಮೂಜಗಂ ಅವರು ಬಹುಶಃ ಬೇರೆಯವರಿಗಾಗಿ ಇವನ್ನು ಪ್ರಕಟಿಸುವರೇನೋ, ಅದೂ ಕೀರ್ತಿವಾರ್ತೆಗಾಗಿ. ತಾವು ಓದುವಂತೆ ಕಾಣುವುದಿಲ್ಲ" ಎಂದು. ಏಕೆಂದರೆ ಮಾಚಿದೇವರು ಧರ್ಮಗುರು ಬಸವಣ್ಣನನ್ನು ತಮ್ಮ ಪ್ರಾಣವನ್ನಾಗಿ ಭಾವಿಸಿದವರು. ಅವರು ತಮ್ಮ ವಚನಗಳಲ್ಲಿ ಸ್ಪಷ್ಟವಾಗಿ ಧರ್ಮಗುರುವೆಂದು, ಧರ್ಮಸ್ಥಾಪಕನೆಂದು, ಪೂರ್ವಾಚಾರಿ ಎಂದು ಬಸವಣ್ಣನವರನ್ನು ಹೊಗಳಿದ್ದಾರಲ್ಲದೆ ಏಕದೇವೋಪಾಸನೆಯನ್ನು ಅತ್ಯಂತ ಕಠೋರವಾಗಿ ಹೇಳಿದ್ದಾರೆ, ಸ್ವಾಮೀಜಿ ತಮಗೆ ಒಪ್ಪಿತವಾಗದ ಬಸವಾದಿ ಪ್ರಮಥರ ವಿಚಾರಗಳನ್ನು ಪ್ರಕಟಿಸುವುದನ್ನಾದರೂ ಕೈ ಬಿಡಬೇಕು ; ಇಲ್ಲವೇ ಪ್ರಕಟಿಸಿದ ಮೇಲೆ ಅದರಂತೆ ನಡೆಯಬೇಕು. ಮಠಾಧಿಪತಿಗಳು ಬೇರೆ ಪುಸ್ತಕ ಪ್ರಕಾಶಕರಂತೆ (ವ್ಯಾವಹಾರಿಕವಾಗಿ) ಕಂಡಕಂಡದ್ದು ಮುದ್ರಿಸಬೇಕಾಗಿಲ್ಲ.

ಶ್ರೀ ಮೂಜಗಂ ಅವರ ಬಸವ ತತ್ತ್ವ ನಿಷ್ಠೆಯನ್ನು ಪರೀಕ್ಷಿಸಲು ಕೆಲವು ಪ್ರಶ್ನೆ ಹಾಕಬಹುದು.

1. ಅಪ್ಪನನ್ನು ಅಪ್ಪಾ ಎಂದು ಕರೆಯದ ಮಗನ ನಿಷ್ಠೆ ಇವರದು! ಎಂಥಾ ಪ್ರಸಂಗದಲ್ಲಿಯೂ ಬಸವಣ್ಣನವರನ್ನು ಧರ್ಮಗುರು ಎನ್ನುವುದಿಲ್ಲ ; ಲಿಂಗಾಯತ ಧರ್ಮದ ಆದ್ಯರು ಎನ್ನುವುದಿಲ್ಲ.

2. ಒಂದು ವೇಳೆ ವಚನ ಸಾಹಿತ್ಯದ ಹೊರತಾದ ಯಾವುದೋ ಧರ್ಮಶಾಸ್ತ್ರವಿದ್ದು, ಅದೇ ಇವರ ಧರ್ಮಶಾಸ್ತ್ರವಿದ್ದರೆ ಇವರು ಆ ಸಾಹಿತ್ಯವನ್ನು ಪ್ರಕಟಿಸಬೇಕೇ

ವಿನಾ ವಚನ ಸಾಹಿತ್ಯವನ್ನು ಪ್ರಕಟಿಸುವ ಅಗತ್ಯವಿಲ್ಲ. ಇಸ್ಲಾಂ ಪ್ರತಿಪಾದಿಸಬೇಕಾದರೆ ಕುರಾನನ್ನು, ಕ್ರೈಸ್ತಧರ್ಮ ಪ್ರತಿಪಾದಿಸಬೇಕಾದರೆ ಬೈಬಲನ್ನು ಆಧಾರವಾಗಿ ಅವರ ಧರ್ಮಬೋಧಕರು ಇಟ್ಟುಕೊಳ್ಳುವಂತೆ, ಈ ವೀರಶೈವ ಸ್ವಾಮಿಗಳು ವಚನ ಸಾಹಿತ್ಯ ಬಳಸಿಕೊಳ್ಳದೆ ಅವರ ಧರ್ಮವನ್ನು ಪ್ರತಿಪಾದಿಸಬೇಕು,

3. ಇವರ ವಿದ್ಯಾಸಂಸ್ಥೆ ನಡೆಸುವ ಎಷ್ಟು ಶಾಲೆ-ಕಾಲೇಜುಗಳಿಗೆ, ಇನ್ನಿತರ ಸಂಸ್ಥೆಗಳಿಗೆ ಬಸವಣ್ಣ-ಚನ್ನಬಸವಣ್ಣ-ಪ್ರಭುದೇವ ಮುಂತಾದವರ ಹೆಸರಿಟ್ಟಿದ್ದಾರೆ ?

4. ಬಸವ ತತ್ತ್ವಪಾಲನೆ ಎಂದರೆ ಸಮಾನತೆಯ ಪ್ರತಿಪಾದನೆ, ಏಕದೇವೋಪಾಸನೆ. ಇವನ್ನು ಎಷ್ಟರ ಮಟ್ಟಿಗೆ ಆಚರಿಸುತ್ತಿದ್ದಾರೆ. ಇವರ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದಲ್ಲಿ ಅರ್ಥಾತ್ ವಟು ತರಬೇತಿ ಕೇಂದ್ರದಲ್ಲಿ ಹುಟ್ಟುಅಯ್ಯನವರಲ್ಲದ ಎಷ್ಟು ಜನ ವಟುಗಳಿಗೆ ಪ್ರವೇಶ ನೀಡಿದ್ದಾರೆ ? "ವರ್ಷವೆಲ್ಲ ಒಟ್ಟಿಡಬಣವೆ ಒಂದು ಮಿಡುಕುರಿಯಲ್ಲಿ ಬೇವಂತೆ," ಇಳಕಲ್ ಶ್ರೀಗಳ ಘೋಷಣೆಗೆ ವಿರೋಧ ಸೂಚಿಸಿ ಬಸವ ತತ್ತ್ವದ ಸಮಾನತೆಗೆ ಏಕೆ ಕಳಂಕ ತರಬೇಕಿತ್ತು ?

★ "ಮೂಜಗಂರವರಿಗೆ ವೀರಶೈವ ಸಮಾಜದಲ್ಲಿ ಒಡಕು ಹುಟ್ಟಿಸುವುದು ಬೇಡವಾಗಿದೆ" ಎಂದಿದ್ದಾರೆ ದುರ್ಗಪ್ಪ. ದಲಿತ ಧುರೀಣ ದುರ್ಗಪ್ಪನವರಿಗೆ ವೀರಶೈವ ಸಮಾಜದ ಮೇಲೆ ಇರುವ ಕಳಕಳಿ ನೋಡಿದರೆ ಆಶ್ಚರ್ಯವಾಗುತ್ತಿದೆ. ಇಳಕಲ್ ಶ್ರೀಗಳು ದಲಿತ ಸಮಾಜದಿಂದ ಬಂದ ವಟುವನ್ನು ಉತ್ತರಾಧಿಕಾರಿ ಮಾಡಿದರೆ ವೀರಶೈವ ಸಮಾಜ ಏಕೆ ಒಡೆಯುತ್ತದೆ ? ಇದು ಶಂಭುಕನನ್ನು ಕೊಲ್ಲಿಸಿದ ಬ್ರಾಹ್ಮಣನ ವಾದದಂತೆ ಅಸಂಬದ್ಧ ! ಅಯೋಧ್ಯೆಯಲ್ಲಿ ಓರ್ವ ಬ್ರಾಹ್ಮಣನ ಮಗ ಸತ್ತ. ಆತ ಬಂದು ಶ್ರೀರಾಮನನ್ನು ಕಂಡು ಹೇಳಿದ, "ಶಂಭುಕ ಶೂದ್ರ ಅವನು ತಪಸ್ಸಿಗೆ ಕುಳಿತಿದ್ದಾನೆ, ಆದರಿಂದ ಪಾಪ ಉಂಟಾಗಿ ನನ್ನ ಮಗ ಸತ್ತ." ಶ್ರೀರಾಮ ಸೀದಾ ಹೋಗಿ ತಪೋಮಗ್ನನಾಗಿದ್ದ ಶಂಭುಕನನ್ನು ಬಾಣಬಿಟ್ಟು ಕೊಂದನು. ತಪಸ್ಸು ಯಾರೇ ಮಾಡಿದರೂ ಒಳ್ಳೆಯದೇ ಆಗಬೇಕಷ್ಟೆ. ಇಷ್ಟನ್ನು ವಿವೇಚನೆ ಮಾಡುವ ಶಕ್ತಿ ರಾಮನಲ್ಲಿ ಇರಲಿಲ್ಲವೆ ? ಹಾಗೆ, ವೀರಶೈವ ಸಮಾಜ ಈ ಕಾರಣದಿಂದ ಏಕೆ ಒಡೆಯುತ್ತದೆ ? ಈಗೇನು ಬಹಳ ಸುಸಂಘಟಿತವಾಗಿದೆಯೊ ? ಬಸವ ತತ್ತ್ವದ ಅಪ್ಪಟ ವಿರೋಧಿಗಳಾದ ಪಂಚಾಚಾರ್ಯರು ಮತ್ತು ಅವರ ಹಿಂಬಾಲಕರದು ಒಂದು ಗುಂಪು ; ಬಸವ ತತ್ತ್ವವಾದಿ ವಿರಕ್ತರದು ಒಂದು ಗುಂಪು, ತಳವಿಲ್ಲದ ಮಗಿಯಂತೆ ಅತ್ತಲೂ ಇಲ್ಲದ ಇತ್ತಲೂ

ಇಲ್ಲದ ಮೂಜಗಂ, ಮುಂಡರಗಿ ಸ್ವಾಮಿಗಳು, ಸಾಗನೂರು ಶ್ರೀಗಳಂತಹವರದು ಒಂದು ಗುಂಪು, ನೇರವಾಗಿ ಬಸವಣ್ಣ–ವಚನ ಸಾಹಿತ್ಯ ಹಿಡಿದು ಹೊರಟ ನಮ್ಮದೊಂದು ಗುಂಪು, ಜೊತೆಗೆ ಮನೆಗೆ ಬಿನ್ನಹ ತೀರಿಸಲು ಹೋಗಿ ಆ ಜನರನ್ನು ಹೊರಗಿನ ಗಾಳಿ (ವಚನ ಸಾಹಿತ್ಯದ ಶುದ್ಧ ಗಾಳಿ) ಬಡಿಯದಂತೆ ಕಪಿಮುಷ್ಟಿಯಲ್ಲಿ ಇಟ್ಟುಕೊಂಡ ಸ್ಥಾನಿಕ(Local)ಗುರುಗಳದು ಒಂದು ಗುಂಪು. ಬರೆಯುತ್ತ ಹೋದರೆ ಬೆಳೆಯುತೊಡಗುತ್ತದೆ. ಇನ್ನು ಒಡೆಯಲು ಸಾಧ್ಯವಿಲ್ಲ ಎನ್ನುವಷ್ಟು ಒಡೆದಿದೆ.

★ "ಮೂಜಗಂ ಅವರನ್ನು ಖಂಡಿಸುವವರು ಶಿವಶರಣರ ಬಾಳಿನಂತೆ ಅಂತರ್ಮುಖಿಗಳಾಗಿ ಬಾಳಿದರೆ ಜಗವೆಲ್ಲ ಉದ್ಧಾರವಾಗುವುದು. ಲೌಕಿಕರಿಗಿಂತಲೂ ಲೌಕಿಕರಾದರೆ ಮಹಾತ್ಮಾ ಬಸವೇಶ ಶಪಿಸದೆ ಬಿಡನು. ಸದುವಿನಯವೇ ಸದಾಶಿವನ ಒಲುಮೆ ಎಂಬುದನ್ನು ಮಾತಿನಲ್ಲಿ ಹೇಳದೆ ಕೃತಿಯಲ್ಲಿ ತನ್ನಿರಿ" ಎಂದು ಮೂಜಗಂ ಅವರು ದುರ್ಗಪ್ಪನವರ ಲೇಖನಿ ಮೂಲಕ ಸಲಹೆ ನೀಡಿದ್ದಾರೆ.

ಇವರ ದೃಷ್ಟಿಯಲ್ಲಿ ಅಂತರ್ಮುಖಿಗಳಾಗುವುದು ಎಂದರೆ ಕ್ರಾಂತಿಕಾರಿ ಪರಿವರ್ತನೆ ಆಶಿಸದೆ ವ್ಯವಸ್ಥೆಯನ್ನು ನಮ್ರವಾಗಿ ಒಪ್ಪಿಕೊಂಡು ತಲೆತಗ್ಗಿಸಿ ಸಾಗುವುದೇ ಇರಬೇಕು! ಇದನ್ನೇ ಅಂತರ್ಮುಖತೆ ಎನ್ನುವುದಾದರೆ ಆಗ ಧರ್ಮಗುರು ಬಸವಣ್ಣನವರು ಶುದ್ಧ ಬಹಿರ್ಮುಖಿ ಎಂದು ಕರೆದು ಅಲ್ಲಿಂದಲೇ ಟೀಕಿಸಲು ಆರಂಭಿಸಬೇಕಾಗುತ್ತದೆ.

ಒದೆವ ಕಾಲನ್ನು ತಲೆ ಮೇಲಿಟ್ಟುಕೊಂಡು ಗೌರವಿಸುವ ಸದ್ವಿನಯವನ್ನು ಶರಣರು ಎಂದೂ ಪ್ರತಿಪಾದಿಸಿಲ್ಲ. ವಿನಯ ಒಂದು ಕಡೆಯಿಂದ ಮಾತ್ರ ಬರಬೇಕೆಂದಿಲ್ಲ, ಎರಡೂ ಕಡೆಯವರಲ್ಲಿ ಅಗತ್ಯವಿದೆ. "ಇತ್ತಿತ್ತಲಾಗಿ ಮಠಾಧೀಶರು ಅತಿ ಲೌಕಿಕರಾಗಿದ್ದರಿಂದ ಭಕ್ತರಿಗೆ ಕಷ್ಟವಾಗಿದೆ. ವಿಜಯ ಮಹಾಂತೇಶನಂತೆ ತಪಸ್ವಿಗಳಾದರೆ ಯಾರಿಗೂ ತೊಂದರೆಯಾಗದು." ಮೂಜಗಂ ಅವರ ಮಾತು ಮತ್ತು ಲೇಖನ ಶೈಲಿಯೇ ಹೀಗೆ. ಸ್ಪಷ್ಟವಾಗಿ ಏನನ್ನೂ ಹೇಳದೆ ನರಳುತ್ತಿರುತ್ತಾರೆ. (ಅದೇ ನೆರಳೇ ದುರ್ಗಪ್ಪನವರ ಮೇಲೂ ಬಿದ್ದಿದೆ ಪಾಪ!)

ಯಾವುದು ಲೌಕಿಕತೆ? ಮಠಾಧಿಪತಿ ಮಾಡಬಾರದ್ದು ಯಾವುದು? ಕಾವಿ ಬಟ್ಟೆಯನ್ನು ಹೊತ್ತಿಗೊಮ್ಮೆ ಬದಲಿಸಿ ಸಿನಿಮಾ ನೋಡಲು ಹೋದರೆ ಅದು ಲೌಕಿಕತೆ! ಮಠದ ಅಥವಾ ಸದ್ಭಕ್ತರ ಮನೆ ಊಟ ರುಚಿಸದೆಂದು ಹೋಟೆಲ್ಲಿನ ಮಸಾಲೆ ದೋಸೆ ತರಿಸಿದರೆ ಲೌಕಿಕತೆ. ಫ್ಯಾಷನ್ ಗೊಂಬೆಗಳಾದ ಲೌಕಿಕ ಲಲನಾ ಮಣಿಯರನ್ನು ಕೂರಿಸಿಕೊಂಡು ಸಿನಿಮಾ ಬಗ್ಗೆ ಮಾತಾಡಿದರೆ ಲೌಕಿಕತೆ. ಭ್ರಷ್ಟಾಚಾರಿಗಳು, ಕುಡುಕರೂ ಆದಂಥವರೊಡನೆ ಕಾಲ ಕಳೆಯುತ್ತ ರಾಜಕೀಯದ ಮಾತಿನಲ್ಲಿ ಹೊತ್ತುಗಳೆದರೆ ಲೌಕಿಕತೆ. ನಾವಾಗಲೀ, ಇಳಕಲ್ ಶ್ರೀಗಳಾಗಲೀ ಇವಾವನ್ನೂ ಮಾಡುವವರಲ್ಲ,

24 ಗಂಟೆಯೂ ಧರ್ಮಪ್ರಚಾರದ ಬಗ್ಗೆ ತಲೆಕೆಡಿಸಿಕೊಳ್ಳುತ್ತ, ಜನರಿಗೆ ಸಂಸ್ಕಾರ ಕೊಡುವ ದಿಶೆಯಲ್ಲಿ ಮೈಮರೆತವರು. ನಮಗಂತೂ, ಹರಟೆ, ಲೌಕಿಕತೆಗೆ ಇರಲಿ ಊಟ–ನಿದ್ರೆಗಳಿಗೂ ಪುರುಸೊತ್ತಿರದು ಎಂಬುದನ್ನು ನಮ್ಮ ಸುತ್ತ ಇರುವವರೆಲ್ಲ ಬಲ್ಲರು. **ಸಮಾಜ ಪರಿವರ್ತನೆ–ಸಮಾನತೆಯ ಚಳುವಳಿಯನ್ನೇ ಲೌಕಿಕತೆ** ಎನ್ನಬೇಕಾದರೆ ಮೂಜಗಂರವರ ಚಿಂತನ ಶೈಲಿ ಹೇಗಿದ್ದೀತು?

★ "ಹನ್ನೆರಡನೆಯ ಶತಮಾನದ ಲಿಂಗವಂತರ ಪೂರ್ವಜರು ಶೂದ್ರರು ದಲಿತರು ಆಗಿದ್ದರು. ಎಂಬ ಮಾತನ್ನು ಒಪ್ಪುವುದಿಲ್ಲ" ಎಂದು ದುರುಗಪ್ಪ ಹೇಳಿದ್ದಾರೆ. ಈ ಹಿಂದೆ ಬರೆದ ಲೇಖನದಲ್ಲಿ ನಾನು, "ಇಂದಿನ ಎಲ್ಲ ಜಂಗಮ (ಅಯ್ಯ) ರು ಹಿಂದೆ ದಲಿತರೇ ಆಗಿದ್ದರು" ಎಂದು ಇಳಕಲ್ ಸ್ವಾಮಿಗಳು ಹೇಳಿದರು ಎಂದು ಯಾರೋ ವರದಿ ಮಾಡಿದ್ದನ್ನು ಕೇಳಿಸಿಕೊಂಡು ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ದುರ್ಗಪ್ಪನವರ ಲೇಖನದಲ್ಲಿ ಬೇರೆ ರೀತಿ ಇದೆ. ಲಿಂಗವಂತರೆಲ್ಲ ಶೂದ್ರರು–ದಲಿತರು ಆಗಿದ್ದರು ಎಂದು ಹೇಳಿದುದಾಗಿ ಇದೆ. ಬಸವಣ್ಣನವರು ಕೊಟ್ಟ ಲಿಂಗವಂತ ಧರ್ಮದ ದೀಕ್ಷೆ ಪಡೆದು ಬ್ರಾಹ್ಮಣನಿಂದ ಭಂಗಿಯವರಿಗೆ ಎಲ್ಲ ಜಾತಿಮತ ಪಂಥಗಳವರೂ ಬಂದಿದ್ದಾರೆ. ಇಂದಿಗೂ ಧರ್ಮಾಂತರ ಹೊಂದದ ಆಯಾ ಜಾತಿ ಪಂಗಡಗಳು ಈ ದೇಶದಲ್ಲಿ ಉಳಿದೇ ಇರುವುದರಿಂದ ಮೂಲ ಹುಡುಕುವುದು ಕಷ್ಟವೇನಿಲ್ಲ. ಆದರಿದು ನಿಷ್ಪ್ರಯೋಜಕವಾದ ತೌಡುಕುಟ್ಟುವ ಕೆಲಸ. ನಾವೂ ಹೇಳುತ್ತಿರುತ್ತೇವೆ :

"ಇಂದು ನಾವು ಧರ್ಮಗುರು ಬಸವಣ್ಣನವರಿಗೆ ಬಹಳ ಋಣಿಗಳಾಗಿರಬೇಕು ಅವರು ಸಂಸ್ಕಾರ ಕೊಡದಿದ್ದರೆ ಎಲ್ಲಿ ಶೂದ್ರರಾಗಿ ಇರುತ್ತಿದ್ದೆವೊ!" ಎಂದು. "ಎಷ್ಟೋ ಜನ ಇಂದು ಧರ್ಮ, ಸಂಸ್ಕಾರವಿಲ್ಲದೆ ಬದುಕುತ್ತಿದ್ದಾರೆ. ನೀವು ಪಡೆದುಕೊಂಡಿದ್ದೀರಿ. ನಮ್ಮ ಬಳಿ ಬರುವಿರಿ; ಒಂದು ಬಾಳೆಯ ಹಣ್ಣು ಆಶೀರ್ವಾದ ಪೂರ್ವಕವಾಗಿ ಕೊಡುತ್ತೇವೆ. ನೀವು ಒಬ್ಬರೆ ತಿನ್ನುವಿರೊ? ಇಲ್ಲ, ಎಲ್ಲರಿಗೆ ಇಷ್ಟಿಷ್ಟು ಕೊಟ್ಟು ತಿನ್ನುವಿರಿ. ಹಾಗೆಯೇ ಧರ್ಮವನ್ನು ಹಂಚಿಕೊಳ್ಳಿರಿ." ಎಂದು ಹಳೆಯ (ಹುಟ್ಟು) ಲಿಂಗಾಯತರಿಗೆ ಹೇಳುತ್ತೇವೆ. ಬಹುಶಃ ಇಳಕಲ್ ಶ್ರೀಗಳು ಆ ಅರ್ಥದಲ್ಲಿ "ಇಂದು ಲಿಂಗವಂತರಿರುವವರು ಒಂದು ಕಾಲದಲ್ಲಿ ಶೂದ್ರರು–ದಲಿತರು ಆಗಿದ್ದರು." ಎಂದಿರಬಹುದು. ಇದೇನು ಶಾಸ್ತ್ರೀಯ ಸಿದ್ಧಾಂತವಲ್ಲ! ಪೂರ್ವದಲ್ಲಿ ಏನಿದ್ದರೇನು ಈಗ ಶರಣರಾಗುವ ಪುಣ್ಯ ಒದಗಿದೆ ತಾನೇ?

ಶ್ರೀ ಮೂಜಗಂ ಅವರು ಇಂದು ಖಚಿತ ನಿಲುವು ತಳೆಯುವುದು ಆಗತ್ಯವಿದೆ. ಶಿವಯೋಗ ಮಂದಿರದ ದೃಷ್ಟಿಕೋನವನ್ನೇ ತಳೆದು, ನಿಗಮಾಗಮಗಳ ಆಶ್ರಯದಲ್ಲಿರಲಿ. ಇಲ್ಲವೇ ಬಸವ ಪಥಿಕರಾಗಿ ವಚನ ಶಾಸ್ತ್ರದ ಆಶ್ರಯಕ್ಕೆ ಬರಲಿ. ಎರಡೂ ಬುಟ್ಟಿಯಲ್ಲಿ ಕಾಲಿಟ್ಟು ಸಾಗುತ್ತ ಸಮಾಜವನ್ನು ದಾರಿ ತಪ್ಪಿಸುವುದು ಬೇಡ. ★★

ಶರಣ. ಕಕ್ಕಯ್ಯ ಪೋಳರ ಪತ್ರ ಕುರಿತು

—ರೇವಣಸಿದ್ಧಯ್ಯ ಬೆಟ್ಟದೂರು, ಕಪ್ಪಗಲ್.

★ "ಕಲ್ಯಾಣ ಕಿರಣ", "ಬಸವ-ಕಿರಣ" ಎರಡೂ ಪತ್ರಿಕೆಗಳಲ್ಲಿ ಶರಣ. ಕಕ್ಕಯ್ಯ ಪೋಳರ ಪ್ರತಿಕ್ರಿಯಾ ಲೇಖನ ಪ್ರಕಟವಾಗಿದೆ. ಅವರು ಎಮ್ಮೆ ಕಥೆ ಹೇಳುವಾಗ, "ಎಮ್ಮೆ ಹೊಲ ಹೊಕ್ಕು ಎಲ್ಲ ಬೆಳೆಯನ್ನು ತಿಂದು ದಗ್ದುದುಳಿದು ಎಲ್ಲ ಹೊಲವನ್ನು ಹಾಳು ಮಾಡಿದೆ." ಎಂದು ಆ ಮಹಿಳೆಯು ತೌರಿನವರು ಗಂಡನಿಗೆ ಶಿಕ್ಷಿಸುವರು ಎಂದು ಬರೆದುದು ಬಸವ ಕಿರಣದಲ್ಲಿದೆ, ಕಲ್ಯಾಣ ಕಿರಣದಲ್ಲಿಲ್ಲ ಏಕೆ ? ವಿವರಣೆ ನೀಡಿರಿ.

✳ ಕಲ್ಯಾಣ ಕಿರಣ – ಬಸವ ಕಿರಣಗಳಲ್ಲಿ ಏಕೆ ಬೇರೆ ಹಲವಾರು ಪತ್ರಿಕೆಗಳಲ್ಲೂ ಅದೇ ಪತ್ರ ಬಂದಿದೆ. ಈ ವಾಕ್ಯಕ್ಕೆ ಕಲ್ಯಾಣ ಕಿರಣದಲ್ಲಿ ಕತ್ತರಿ ಪ್ರಯೋಗವಾಗಿದೆ. ಅದನ್ನು ನಾನೇ ಮಾಡಿದ್ದೇನೆ. ಕಾರಣ ಹೀಗಿದೆ. ಯಾವಾಗಲೂ ದೃಷ್ಟಾಂತಗಳು ತತ್ತ್ವ ನಿರೂಪಣೆಯ ಜೀವಾಳವಾಗಿರುತ್ತವೆ. ಅವನ್ನು ಎಲ್ಲಿ ಎಷ್ಟು ಬೇಕೋ ಅಷ್ಟೇ ಜಾಣತನದಿಂದ ಬಳಸಬೇಕು. ಒಂದು ದೃಷ್ಟಾಂತವನ್ನು ತೀರಾ ಜಗ್ಗಿದಾಗ ಅದರ ಸಾರ ಹೋಗುವುದು. ಈ ಕಥೆಯಲ್ಲಿ ಮೂರ್ಖರು ಯಾರು ? ಆ ಗಂಡ-ಹೆಂಡತಿಯೇ ವಿನಾ ನೆರೆಮನೆಯವರಲ್ಲ, ತೌರಿನವರಲ್ಲ. ಅವರಿಬ್ಬರೂ ವಾದ ಮಾಡುತ್ತ ಜಗಳಕ್ಕೆ ಇಳಿದರು. ಬಹುಶಃ ಆಕೆ ತನ್ನ ತೌರಿನವರಿಗೆ ಹೇಳಿರಬಹುದು "ನನ್ನ ಗಂಡ ಎಮ್ಮೆ ತಂದಾಗ ನಿಮಗೆ ಮಜ್ಜಿಗೆ ಕೊಡಬಾರದು ಅಂತಾನೆ." ಆಗ ಅವರು "ಹೌದಾ, ಇದ್ದೂರಿನಲ್ಲಿರುವ ತೌರಿಗೆ ಮಜ್ಜಿಗೆ ಕೊಡಬಾರದು ಅಂತೀಯಲ್ಲ." ಎಂದು ಅವನನ್ನು ಬಡಿಯಬಹುದೇ ವಿನಾ, 'ಎಮ್ಮೆ ನುಗ್ಗಿ ಹೊಲ ತುಳೀತು.' ಎಂದು ಹೇಳಲು ಹೇಗೆ ಸಾಧ್ಯ ? ಎಮ್ಮೆ ತುಳಿಯುವುದು ಸ್ಥೂಲ ಘಟನೆ. ಅದು ಪ್ರತ್ಯಕ್ಷ ನಡೆಯದೆ ಎಷ್ಟೇ ಮೂರ್ಖರಿದ್ದರೂ ಅನ್ನಲು ಸಾಧ್ಯ ?

ಹೀಗೆ ಆ ವಾಕ್ಯ ಬಳಸಿದರೆ ಕಥೆ ಅಸಂಬದ್ಧವಾಗುತ್ತಿತ್ತು ಎಂದು ತೆಗೆದು ದೃಷ್ಟಾಂತ-ದಾರ್ಷ್ಟಾಂತಗಳ ಬಿಗಿಗೆ ಬೇಕಾದಷ್ಟು ಮಾತ್ರ ಇರಿಸಿಕೊಂಡೆ. ★

ಸಂಪಾದನೆ

ಇಂಗ್ಲೆಂಡು, ಅಮೇರಿಕಾ ದೇಶಗಳಲ್ಲಿ 'ಸಂಪಾದಕರು' ಎಂಬ ಉದ್ಯೋಗಿಗಳಿರುತ್ತಾರೆ. ಲೇಖಕರು ತಮ್ಮ ಆಲೋಚನೆಗಳನ್ನು ಬರೆದಿಟ್ಟು ಬಿಡುತ್ತಾರೆ. ಕೆಲವರ ಹಸ್ತಬರಹ ಚೆನ್ನಾಗಿರುವುದಿಲ್ಲ, ವಾಕ್ಯರಚನೆ ಸರಿ ಇರುವುದಿಲ್ಲ. ಆಗ ಆ ಸಂಪಾದಕರು ಲೇಖಕರ ಬರಹದ ಭಾವ-ಅರ್ಥಕ್ಕೆ ಚ್ಯುತಿ ಬರದಂತೆ ಲೇಖನವನ್ನು ಸುಸಂಬದ್ಧವಾಗಿ ಬರೆದು ಮುದ್ರಣಕ್ಕೆ ಕಳಿಸುತ್ತಾರೆ ಮತ್ತು ತಮ್ಮ ಹೆಸರು ಕಾಣಿಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ ಕೃತಿಚೌರ್ಯ ಸಹ ಮಾಡುವುದಿಲ್ಲ. ಆ ಪದ್ಧತಿ ನನಗೆ ಬಹಳ ಹಿಡಿಸಿತು. ನಾನು 1976 ರಲ್ಲಿ ಇಂಗ್ಲೆಂಡಿಗೆ ಹೋದಾಗ ಹೆಪ್ಪಿಟ್ಟ ಹಾಲು ಭಾಷಾಂತರ ಮಾಡಲು ಆರಂಭಿಸಿ ನೋಡೋಣ ಎಂದು ಅಂಥ ಸಂಪಾದಕರೊಬ್ಬರಿಗೆ ಕೆಲವು ಪುಟಗಳಷ್ಟು ತೋರಿಸಿದೆ. ಆಗ ಅಲ್ಲಿ ಆ ಕಾಯಕವೇ ಇದೆ ಎಂಬುದು ತಿಳಿಯಿತು. ಕಲ್ಯಾಣ ಕಿರಣಕ್ಕೆ ಸಾಕಷ್ಟು ಬೇರೆ ಬೇರೆ ಲೇಖನಗಳು ಬೇರೆ ಬೇರೆ ಬರಹಗಾರರವು ಬರುತ್ತವೆ. ಸುಸಂಬದ್ಧತೆ ಇಲ್ಲದೆ ಇದ್ದಾಗ ಹಾಗೆಯೇ ಮುದ್ರಿಸಲು ಮನಸ್ಸು ಬರದು ; ಅವನ್ನು ತಿದ್ದಲು ತುಂಬಾ ಸಮಯ ಹಿಡಿಯುವುದು. ಹೀಗಾಗಿ ಮುದ್ರಿಸಲು ಆಗುವುದಿಲ್ಲ. -ಮಾತಾಜಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

BMCT

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬಸವ ತತ್ತ್ವ ತರಬೇತಿ ಶಿಬಿರ

ಭಕ್ತಿಪಕ್ಷ ಸಮ್ಮೇಳನ

1994, ಅಕ್ಟೋಬರ **16** ರಿಂದ **23** ರ ವರೆಗೆ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಮತ್ತು ವಿಶ್ವಕಲ್ಯಾಣ ಮಿರ್ಷ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಒಂದು ವಾರದ ಬಸವ ತತ್ತ್ವ ತರಬೇತಿ ಶಿಬಿರವನ್ನು ದಿ. 16-10-1994 ರಿಂದ 23-10-1994 ರವರೆಗೆ ಏರ್ಪಡಿಸಲಾಗಿದೆ. ಬಹುಜನ ಶರಣ ಬಂಧುಗಳ ಕೋರಿಕೆಯ ಮೇರೆಗೆ ಬೆಂಗಳೂರು ಬಳಿ ಇರುವ ಬಸವ ಗಂಗೋತ್ರಿಯಲ್ಲಿ ತರಬೇತಿ ಶಿಬಿರ ಇಡಲಾಗಿದೆ. ಪ್ರವಚನ, ಯೋಗಾಸನ, ಪ್ರಾಣಾಯಾಮ, ಧ್ಯಾನ, ಚರ್ಚಾ ಗೋಷ್ಠಿ ಮುಂತಾದ ಆಧ್ಯಾತ್ಮಿಕ ಚಟುವಟಿಕೆಗಳಿಂದ ಕೂಡಿದ ಶಿಬಿರವು, ದಿ. 16-10-1994 ರಂದು ಬೆಳಿಗ್ಗೆ 10 ಗಂಟೆಗೆ ಆರಂಭವಾಗಿ, ದಿ. 23-ರಂದು ಮ. 3 ಗಂಟೆಗೆ ಮಂಗಲಗೊಳ್ಳುವುದು. ಶಿಬಿರ ಶುಲ್ಕ ಒಬ್ಬರಿಗೆ 150-00 ರೂ.ಗಳು.

ಅಕ್ಟೋಬರ್ 21, 22, 23 ರಂದು "ಭಕ್ತಿಪಕ್ಷ ಸಮ್ಮೇಳನ"ವು ನಡೆಯಲಿದೆ. ದಿ. 21 ರಂದು ಬೆಳಿಗ್ಗೆ 10 ಗಂಟೆಗೆ ಭಕ್ತಿಪಕ್ಷ ಸಮ್ಮೇಳನದ ಪ್ರಾರಂಭೋತ್ಸವ, ದಿ. 23 ರಂದು ಬೆಳಿಗ್ಗೆ 10 ಗಂಟೆಗೆ ಸಮಾರೋಪ ಸಮಾರಂಭ. ಸಮ್ಮೇಳನ ಶುಲ್ಕ 60 ರೂಗಳು. ಸಮ್ಮೇಳನದ 3 ದಿವಸಗಳ ಕಾಲ ಮುಂದಿನ ಶರಣ ಮೇಳ, ರಾಷ್ಟ್ರೀಯ ಬಸವ ದಳ ಸಂಘಟನೆ, ಇನ್ನೂ ಮುಂತಾಗಿ ಮಹತ್ವಪೂರ್ಣ ಚರ್ಚೆಗಳನ್ನು ಮಾಡಲಾಗುವುದು.

ಶರಣ ಮೇಳದ ಸಮಯದಲ್ಲಿ ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು ಸೇವಾ ನಿರತರಾಗುವುದರಿಂದಲೂ, ಮತ್ತು ಕಾರ್ಯಕ್ರಮಗಳ ಒತ್ತಡ ಬಹಳವಿರುವುದರಿಂದಲೂ ಸಂಘಟನೆ-ಸುಧಾರಣೆ ಕುರಿತು ಚರ್ಚಿಸಲು ಸಮಯವೇ ಸಾಕಾಗದು. ಆದ್ದರಿಂದ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳು ಶಿಬಿರದ ಪ್ರಶಾಂತ ಸಮಯವನ್ನು ಸದುಪಯೋಗ ಮಾಡಿಕೊಳ್ಳಬೇಕು. ಈಗ ಆಗಿರುವ ಎಲ್ಲ ರಾಷ್ಟ್ರೀಯ ಬಸವ ದಳಗಳಿಂದಲೂ ಪ್ರತಿನಿಧಿಗಳು ಆಗಮಿಸಿದರೆ ರಾಜ್ಯ ಸಮಿತಿ, ಜಿಲ್ಲಾ ಸಮಿತಿ ಮುಂತಾಗಿ ಮಾಡುವ ಉದ್ದೇಶವಿದೆ. ಒಂದು ವಾರ ಕಾಲ ಬರಲು ಆಗದಂತಹ ಕಾರ್ಯಭಾರ ಉಳ್ಳವರು, ಕಡೆಯ 3 ದಿವಸಗಳ ಮಟ್ಟಿಗಾದರೂ ಬರಬೇಕು. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಗಳಿಗೆ ರಾಜ್ಯ ಸಮಿತಿ ಮತ್ತು ಜಿಲ್ಲಾ ಸಮಿತಿಗಳನ್ನು ಮಾಡಲಾಗುವುದು.

ಹೆಚ್ಚಿನ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು. ವಿವರಗಳಿಗಾಗಿ ಪತ್ರ ಬರೆಯುವವರು ಸೋದರಿ ಕಸ್ತೂರಿ, ವ್ಯವಸ್ಥಾಪಕರು, ಬಸವ ಗಂಗೋತ್ರಿ, ಕುಂಬಳಗೋಡು-560074. ತಾ-ಬೆಂಗಳೂರು ದಕ್ಷಿಣ, ಇಲ್ಲಿಗೆ ಬರೆಯಬೇಕು.

ವಿ. ಸೂ : 1995 ರ ಜನವರಿ 12 ರಿಂದ 15 ರ ವರೆಗೆ ನಡೆಯುವ ಎಂಟನೆಯ ಶರಣ ಮೇಳದ ಪ್ರಚಾರ ಸಾಮಗ್ರಿಗಳಾದ ಕರಪತ್ರ, ಭಿತ್ತಿಪತ್ರ, ಸಿನಿಮಾ ಸ್ಲೈಡ್, ರಸೀತಿ ಪುಸ್ತಕ ಮುಂತಾದುವನ್ನು ಮುಕ್ತಾಯ ದಿನದಂದು ವಿತರಿಸಲಾಗುವುದು.

ದಿ. 15-7-1994 **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**

ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲ ಸಂಗಮ-587115

ಕಲ್ಯಾಣ ಕಿರಣ KRNB 312/BGW 94 ಜುಲೈ, 1994

